ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ

## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

# ಸುಬ್ಬರಾಯನ ಕೆರೆ

ಪ್ರಧಾನ ಸಂಪಾದಕರು

**ಡಾ. ಬಿ. ವಿ. ವಸಂತಕುಮಾರ್**

ಸಂಪಾದಕರು

**ಡಾ. ಎಸ್. ಜಿ. ರಾಮದಾಸ ರೆಡ್ಡಿ**

ಲೇಖಕರು

**ಡಾ. ಇಂದಿರಾ ಬಿ. ಪಿ.**

**ಕರ್ನಾಟಕ ಸಾಹಿತ್ಯ ಅಕಾಡೆಮಿ**
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨
ದೂರವಾಣಿ: ೦೮೦–೨೨೨೧೧೭೩೦ / ೨೨೧೦೬೪೬೦
www.karnatakasahithyaacademy.org
ಇ–ಮೇಲ್: sahithya.academy@gmail.com

**SUBBARAYANA KERE:** An Introduction Book on Places in Karnataka that Played a Major Role in the Freedom Struggle, Written by Dr. Indira B.P., Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002


**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
೧. ಡಾ. ಎಸ್. ಜಿ. ರಾಮದಾಸ ರೆಡ್ಡಿ
೨. ಡಾ. ಮೃತ್ಯುಂಜಯ ರುಮಾಲೆ
೩. ಶ್ರೀ ನರೇಂದ್ರಕುಮಾರ್ ಎಸ್.ಎಸ್.
೪. ಡಾ. ಪ್ರಕಾಶ ಗ. ಖಾಡೆ
೫. ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ



ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ



ಮುದ್ರಣ: ೨೦೨೨
ಪ್ರತಿಗಳು: ೧೦೦೦
ಬೆಲೆ: ರೂ. ೩೦/–
ಪುಟ: ೪೮

ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್


ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೫೮೧



**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ವಿಧಾನಸೌಧ
ಬೆಂಗಳೂರು–560 001

## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಸ್ವಾತಂತ್ರ್ಯದ ಅಮೃತಮಹೋತ್ಸವ

ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು



ಕರ್ನಾಟಕ ಸರ್ಕಾರ

## ಶುಭ ಸಂದೇಶ

**‘ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ’**


ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.



**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

## ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಘಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು.



ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ, ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**

ಅಧ್ಯಕ್ಷರು

# ಲೇಖಕರ ಮಾತು

ಪ್ರಗತಿಯತ್ತ ಹೆಜ್ಜೆಯಿಡುತ್ತಿರುವ ನಮ್ಮ ಭಾರತ ದೇಶಕ್ಕೆ ೭೫ ವರ್ಷಗಳ ಸ್ವಾತಂತ್ರ್ಯ ಸಂಭ್ರಮ. ಕೇಂದ್ರ ಸರ್ಕಾರವು 'ಆಜ಼ಾದಿಕಾ ಅಮೃತ ಮಹೋತ್ಸವ' ಕಾರ್ಯಕ್ರಮವನ್ನು ವಿಶಿಷ್ಟವಾಗಿ ನಡೆಸುತ್ತಿದೆ. ನಮ್ಮ ಕರ್ನಾಟಕದಲ್ಲಿಯೂ ಕರ್ನಾಟಕ ಸಾಹಿತ್ಯ ಅಕಾಡೆಮಿ ಈ ಅಮೃತ ಮಹೋತ್ಸವದ ಸಂಭ್ರಮದಲ್ಲಿ ೭೫ ಕಿರು ಹೊತ್ತಿಗೆಗಳನ್ನು ತರುವ ಹೆಮ್ಮೆಯ ಕಾರ್ಯವನ್ನು ಕೈಗೊಂಡಿದೆ. ಐತಿಹಾಸಿಕವಾಗಿ ಸ್ವಾತಂತ್ರ್ಯ ಚಳುವಳಿಯ ಕಾಲದ ೭೫ ಪ್ರಮುಖ ಸ್ಥಳಗಳನ್ನು ಗುರುತಿಸಿ ಅವುಗಳ ಪ್ರಾಮುಖ್ಯತೆಯ ಬಗ್ಗೆ ಶಾಶ್ವತವಾಗಿ ಪುಸ್ತಕ ರೂಪದಲ್ಲಿ ದಾಖಲಿಸುತ್ತಿರುವುದು ಅತ್ಯಂತ ಶ್ಲಾಘನೀಯ ಅಂಶವಾಗಿದೆ. ಇದಕ್ಕಾಗಿ ಮೊದಲಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಕಿರುಹೊತ್ತಿಗೆಗಳನ್ನು ಹೊರತರಲು ಸಂಪಾದನಾ ಕಾರ್ಯದ ಜವಾಬ್ದಾರಿಯನ್ನು ನಮ್ಮ ಕಾಲೇಜಿನ ಇತಿಹಾಸ ವಿಭಾಗದ ಮುಖ್ಯಸ್ಥರಾದ ಡಾ. ಎಸ್. ಜಿ. ರಾಮದಾಸರೆಡ್ಡಿಯವರು ವಹಿಸಿಕೊಂಡಿರುವುದು ಅತ್ಯಂತ ಸಂತಸದ ವಿಷಯವಾಗಿದೆ. ಡಾ. ಎಸ್. ಜಿ. ರಾಮದಾಸರೆಡ್ಡಿ ನನಗೆ ಯಾವುದಾದರೂ ಎರಡು ಸ್ಥಳಗಳನ್ನು ಆಯ್ಕೆ ಮಾಡಿಕೊಂಡು ಬರೆಯಲು ಕೇಳಿದರು. ನಾನು ಸುಬ್ಬರಾಯನ ಕೆರೆ ಹಾಗೂ ಬದನವಾಳು ಸ್ಥಳಗಳನ್ನು ಆಯ್ಕೆ ಮಾಡಿಕೊಂಡೆ. ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ನಮ್ಮ ತಂದೆ ದಿ. ಬಿ. ಆರ್. ಪ್ರಾಣೇಶರಾಯರು ತಮ್ಮ ನೆನಪುಗಳನ್ನು ಹಂಚಿಕೊಳ್ಳುವ ಸಂದರ್ಭದಲ್ಲಿ ಅನೇಕ ಬಾರಿ ಸುಬ್ಬರಾಯನ ಕೆರೆಯ ಬಗ್ಗೆ ಪ್ರಸ್ತಾಪಿಸುತ್ತಿದ್ದರು. ಆ ಒಂದು ನೆನಪಿನ ನಂಟು ಸುಬ್ಬರಾಯನ ಕೆರೆಯ ಬಗ್ಗೆ ಬರೆಯಲು ನನಗೆ ಸ್ಫೂರ್ತಿ ನೀಡಿತು. ಬದನವಾಳು ಖಾದಿ ಗ್ರಾಮೋದ್ಯೋಗದ ಬಗ್ಗೆ ನಾನು ಯು.ಜಿ.ಸಿ ಮೈನರ್ ರಿಸರ್ಚ್ ಪ್ರಾಜೆಕ್ಟ್ ಮಾಡಿದಾಗ ಅಲ್ಲಿ ಕ್ಷೇತ್ರ ಕಾರ್ಯ ಮಾಡಿದ್ದೆನು. ಹಾಗಾಗಿ ಮತ್ತೊಂದು ಸ್ಥಳವಾಗಿ ಬದನವಾಳು ಆಯ್ಕೆ ಮಾಡಿ ಕೊಂಡೆನು.

ಈ ಐಕಾನಿಕ್ ಸ್ಥಳಗಳ ಬಗ್ಗೆ ಸಂಶೋಧನಾ ಕಿರು ಹೊತ್ತಿಗೆ ರಚಿಸಲು ಅನುವು ಮಾಡಿಕೊಟ್ಟ ಕನ್ನಡ ಸಾಹಿತ್ಯ ಅಕಾಡೆಮಿ ಹಾಗೂ ಸಂಪಾದಕರಾದ ಡಾ. ಎಸ್. ಜಿ. ರಾಮದಾಸರೆಡ್ಡಿಯವರಿಗೂ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಸುಬ್ಬರಾಯನಕೆರೆ ಹಾಗೂ ಬದನವಾಳು ಸ್ಥಳಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ಅದರ ಬರವಣಿಗೆಯ ಸಂದರ್ಭದಲ್ಲಿ ಅಕೆಡೆಮಿಕ್ ಚರ್ಚೆ ನಡೆಸಿ ಅತ್ಯಮೂಲ್ಯ ಸಲಹೆಗಳನ್ನು ನೀಡಿದ ಹಿರಿಯ ಪತ್ರಕರ್ತರಾದ ಶ್ರೀಯುತ ಈಚನೂರು ಕುಮಾರ್ ಹಾಗೂ ಡಾ. ನರೇಂದ್ರ ಪ್ರಸಾದ್, ನಿವೃತ್ತ ಇತಿಹಾಸ ಪ್ರಾಧ್ಯಾಪಕರು, ಜೆ.ಎಸ್.ಎಸ್. ಮಹಿಳಾ ಕಾಲೇಜು, ಸರಸ್ವತಿಪುರಂ, ಮೈಸೂರು ಇವರಿಬ್ಬರಿಗೂ ಗೌರವಪೂರ್ಣ ನಮನಗಳು. ಮಾಹಿತಿಗಳನ್ನು ಸಂಗ್ರಹಿಸಲು ಮೈಸೂರಿನ ವಿಭಾಗೀಯ ಪತ್ರಾಗಾರ ಇಲಾಖೆಗೆ ಭೇಟಿ ನೀಡಿದಾಗ ಸಹಕಾರ ನೀಡಿದ ಹಿರಿಯ ಸಹಾಯಕ ನಿರ್ದೇಶಕರಾದ ಡಾ. ಮಂಜುನಾಥ್ ಹಾಗೂ ವಿಭಾಗೀಯ ಪತ್ರಾಗಾರದ ಇಲಾಖೆಯಲ್ಲಿರುವ ಸಿಬ್ಬಂದಿ ವರ್ಗದವರಿಗೂ ವಂದನೆಗಳನ್ನು ಅರ್ಪಿಸುತ್ತೇನೆ.

ನಾನು ಬರೆದ ಬರಹಗಳನ್ನು ಅಚ್ಚುಕಟ್ಟಾಗಿ ಕನ್ನಡದಲ್ಲಿ ತಪ್ಪಿಲ್ಲದೆ ಬೆರಳಚ್ಚು ಮಾಡಿ ಸಕಾಲಕ್ಕೆ ನೀಡಿದ ಶ್ರೀಯುತ ನಿಧೀಶ್ ಕುಮಾರ್ ಅವರಿಗೆ ಹೃತ್ಪೂರ್ವಕ ಧನ್ಯವಾದಗಳು. ನನ್ನ ಎಲ್ಲಾ ಅಕಾಡೆಮಿಕ್ ಕಾರ್ಯಗಳಿಗೂ ಬೆನ್ನೆಲುಬಾಗಿರುವ ನನ್ನ ಕುಟುಂಬಕ್ಕೂ ಅನಂತ ವಂದನೆಗಳು.

**ಡಾ. ಇಂದಿರಾ ಬಿ. ಪಿ.**
ಇತಿಹಾಸ ಸಹ ಪ್ರಾಧ್ಯಾಪಕರು,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಕುವೆಂಪುನಗರ, ಮೈಸೂರು.

## ಪರಿವಿಡಿ

| | |
|---|---|
| ಶುಭ ಸಂದೇಶ | ೩ |
| ಶುಭ ಸಂದೇಶ | ೫ |
| ಪ್ರಧಾನ ಸಂಪಾದಕರ ಮಾತು | ೭ |
| ಲೇಖಕರ ಮಾತು | ೧೧ |
| ಸುಬ್ಬರಾಯನ ಕೆರೆ: (ಸ್ವಾತಂತ್ರ್ಯ ಹೋರಾಟದ ವೀರ ಗಾಥೆ) | ೧೫ |
| ಸುಬ್ಬರಾಯನ ಕೆರೆ ಐತಿಹಾಸಿಕ ಹಿನ್ನೆಲೆ: | ೧೬ |
| ಮೈಸೂರಿನಲ್ಲಿ ಸ್ವಾತಂತ್ರ್ಯ ಹೋರಾಟದ ಆರಂಭದ ಹೆಜ್ಜೆಗಳು | ೨೧ |
| ಉಪ್ಪಿನ ಸತ್ಯಾಗ್ರಹ | ೨೫ |
| ಮೈಸೂರು ಕಾಂಗ್ರೆಸ್ ಸ್ಥಾಪನೆ ಮತ್ತು ಶಿವಪುರ ಸತ್ಯಾಗ್ರಹ | ೨೮ |
| ಹ್ಯಾಮಿಲ್ಟನ್ ಸತ್ಯಾಗ್ರಹ | ೩೩ |
| ೧೯೪೨ರ ಕ್ವಿಟ್ ಇಂಡಿಯಾ ಚಳುವಳಿ | ೩೩ |
| ಜವಾಬ್ದಾರಿ ಸರ್ಕಾರದ ಸ್ಥಾಪನೆಗಾಗಿ ಮೈಸೂರು ಚಲೋ ಚಳುವಳಿ–೧೯೪೭ | ೩೪ |
| ಜವಾಬ್ದಾರಿ ಸರ್ಕಾರದ ಸ್ಥಾಪನೆ: ಸುಬ್ಬರಾಯನ ಕೆರೆಯಲ್ಲಿ ಕೆ. ಸಿ. ರೆಡ್ಡಿಯವರ ಭಾಷಣ | ೩೬ |
| ಸುಬ್ಬರಾಯನ ಕರೆಯಲ್ಲಿ ಭಾಷಣ ಮಾಡಿದ ಮಹನೀಯರು | ೩೯ |
| ಪ್ರಸ್ತುತ ಸುಬ್ಬರಾಯನ ಕೆರೆಯ ಛಾಯಚಿತ್ರಗಳು | ೪೧ |

ಪರಾಮರ್ಶನ ಗ್ರಂಥಗಳು ೪೪

ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ ೪೫

# ಸುಬ್ಬರಾಯನ ಕೆರೆ
# (ಸ್ವಾತಂತ್ರ್ಯ ಹೋರಾಟದ ವೀರ ಗಾಥೆ)

ಭಾರತದ ಸ್ವಾತಂತ್ರ್ಯ ಚಳುವಳಿ ವಿಶ್ವದ ಇತಿಹಾಸದಲ್ಲೇ ಅಪೂರ್ವವಾದ ಅಸಾಧಾರಣ ಚಳುವಳಿಯಾಗಿದೆ. ಭಾರತದ ರಾಷ್ಟ್ರೀಯ ಚಳುವಳಿಯು ಸುದೀರ್ಘ ಕಾಲ ವ್ಯಾಪ್ತಿಯನ್ನು ಹೊಂದಿದೆ. ಇದರ ಪ್ರಾದೇಶಿಕ ವ್ಯಾಪ್ತಿಯೂ ವಿಶಾಲವಾದುದಾಗಿದೆ. ಇದು ನಾಲ್ಕಾರು ತಲೆಮಾರಿನ ಜನ ರೂಪಿಸಿದ ಚಳುವಳಿಯಾಗಿದ್ದು, ಜಾತಿ, ಮತ, ಭಾಷೆ, ಪ್ರಾದೇಶಿಕ ವೈವಿಧ್ಯತೆಗಳೆಲ್ಲವನ್ನು ತನ್ನಲ್ಲೇ ಲೀನಗೊಳಿಸಿ ಕೊಂಡ ವಿಶಿಷ್ಟ ಚಳುವಳಿಯಾಗಿದೆ. ಭಾರತದ ರಾಷ್ಟ್ರೀಯ ಚಳುವಳಿಯು ಭಾರತೀಯರ ಅಂತಃ ಚೈತನ್ಯದ ಬಲದ ನಿದರ್ಶನವಾಗಿದೆ. ಸ್ವಾತಂತ್ರ್ಯ ಚಳುವಳಿಯ ದೀರ್ಘಾವಧಿಯ ಹೋರಾಟದಲ್ಲಿ ಬಲಾಢ್ಯವಾದ ಸಾಮ್ರಾಜ್ಯ ಶಕ್ತಿಯನ್ನು ಎದುರಿಸಿ ಅದು ಮತ್ತೆ ಮತ್ತೆ ಎದ್ದು ನಿಂತು ತೋರಿದ ಕಸುವು ಅಪೂರ್ವವಾಗಿದೆ.

ಮೈಸೂರಿನ ಸಂಸ್ಥಾನದ ಗಂಡುಗಲಿ ಹೋರಾಟಗಾರರಾದ ಎಂ. ಎನ್. ಜೋಯಿಸ್ ಬಿಡುಗಡೆಯ ಬೆಲೆಯ ಬಗ್ಗೆ ಹೀಗೆ ಬರೆಯುತ್ತಾರೆ: “ರಕ್ತದ ಓಕುಳಿಯಿಂದ ಪಿಚಕಾರಿಯನ್ನು ತುಂಬು, ಇಂದು ನಮಗೆಲ್ಲಾ ದೀವಳಿಗೆ; ಹೀಗೆ ಹಾಡುತ್ತಾ ಹಾಡುತ್ತಾ ಭಗತ್ ಸಿಂಗನು ನೇಣಿಗೆ ಒಳಗಾದ: ಸಾವನ್ನಪ್ಪಿದ; ಅಮರನಾದ ಬೆಚ್ಚಿದನೇ? ಬೆದರಿದನೇ? ಇಲ್ಲ. ಲಾಹೋರಿನ ಸೆರೆಮನೆಯಲ್ಲಿ ೬೪ ದಿನಗಳು ಅಖಂಡ ಉಪವಾಸ ಮಾಡಿ ಜತೀಂದ್ರದಾಸನು ಆತ್ಮಾರ್ಪಣೆ ಮಾಡಿದನು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಇಂತಹ ಉದಾಹರಣೆಗಳೆಷ್ಟೋ. ಹತ್ತೊಂಬತ್ತು ಇಪ್ಪತ್ತನೆಯ ಶತಮಾನಗಳಲ್ಲಿ ಸ್ವಾತಂತ್ರ್ಯ ದೇವಿಯ ಕರೆಗೆ ಓಗೊಟ್ಟು, ಉತ್ಸಾಹ ಪೂರ್ಣ ಸ್ಫೂರ್ತಿಯಿಂದ ಹೋರಾಟದಲ್ಲಿ ಧುಮುಕಿ ಮನೆ–ಮಠ, ಹೆಂಡತಿ–ಮಕ್ಕಳು, ವ್ಯಾಸಂಗ ಮುಂದಿನ ಪುರೋಭಿವೃದ್ಧಿ ಎಲ್ಲವನ್ನೂ ಬದಿಗಿಟ್ಟವರು ಭಾರತದಲ್ಲಿ ಅದೆಷ್ಟೋ ಮಂದಿ. ಅವರು ಪಟ್ಟ ಕೋಟಲೆಗಳೆಷ್ಟೋ!

ಕಂಡ ಬವಣೆಗಳೆಷ್ಟೋ! ಎಲ್ಲವನ್ನೂ ತ್ಯಾಗ ಮಾಡಿ, ಜೈಲುಗಳಲ್ಲಿ ನರಕವಾಸವನ್ನು ಅನುಭವಿಸಿ ತಮ್ಮ ಪೂರ್ಣ ಸಂಸಾರವನ್ನೇ ಬೂದಿ ಮಾಡಿಕೊಂಡವರೆಷ್ಟೋ! ದುಡಿದು ಮಡಿದವರೆಷ್ಟೋ!".

ಅಂತೆಯೇ ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಭಾರತದುದ್ದಕ್ಕೂ ಅನೇಕ ಪ್ರಮುಖ ಸ್ಥಳಗಳು ಐತಿಹಾಸಿಕ ಮೈಲಿಗಲ್ಲುಗಳಾಗಿ ಉಳಿದಿವೆ. ಉದಾಹರಣೆ: ಜಲಿಯನ್‌ವಾಲಾಬಾಗ್ ಹಾಗೆಯೇ ಕರ್ನಾಟಕಕ್ಕೆ ಬಂದರೆ ವಿಧುರಾಶ್ವತ್ಥ. ಅದೇ ಮಾದರಿಯಲ್ಲಿ ಹಲವಾರು ನಗರಗಳು, ಪಟ್ಟಣಗಳು ಗ್ರಾಮಗಳಲ್ಲಿರುವ ಅನೇಕ ಐತಿಹಾಸಿಕವಾಗಿ ಮಹತ್ವಪೂರ್ಣ ಸ್ಥಳಗಳು ಅಸ್ಪಷ್ಟವಾಗಿ ಗುರುತೇಯಿಲ್ಲದೆ ಕಣ್ಮರೆಯಾಗುತ್ತಿವೆ. ಅಭೂತಪೂರ್ವ ಐತಿಹಾಸಿಕ ಘಟನೆಗಳಿಗೆ ಸಾಕ್ಷಿಯಾದ ಸ್ಥಳಗಳ ಪ್ರಾಮುಖ್ಯತೆಯನ್ನು ಮುಂದಿನ ಜನಾಂಗಗಳಿಗೆ ಕಾಪಿಡುವುದು ಅತ್ಯವಶ್ಯಕವಾಗಿದೆ. ಇಂತಹ ಸ್ಥಳಗಳಲ್ಲಿ ತಾಯ್ನಾಡಿಗಾಗಿ ಹೋರಾಡಿದ ಧೀರ–ಧೀಮಂತ ಹೋರಾಟಗಾರರ ಹೆಜ್ಜೆ ಗುರುತುಗಳಿವೆ. ಅಪಾರ ಬಲಿದಾನ ತ್ಯಾಗ ಹೋರಾಟದ ಮೂಲಕ ಪಡೆದ ಸ್ವಾತಂತ್ರ್ಯದ ಕುರುಹುಗಳನ್ನು ಇತಿಹಾಸದಿಂದ ಕಣ್ಮರೆಯಾಗದಂತೆ ಶಾಶ್ವತವಾಗಿ ಉಳಿಸಬೇಕಾಗಿದೆ. ಇದೇ ಸ್ವಾತಂತ್ರ್ಯದ ವೀರಾಗ್ರಣಿಗಳಿಗೆ ನೀಡಬಹುದಾದ ಅಮರ ಕಾಣಿಕೆಯಾಗಿದೆ.

ಈ ನಿಟ್ಟಿನಲ್ಲಿ ಮೈಸೂರು ನಗರದಲ್ಲಿ ಸುಬ್ಬರಾಯನಕೆರೆ ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಜ್ವಲಂತ ಸಾಕ್ಷಿಯಾಗಿ ಇಂದಿಗೂ ಉಳಿದಿದೆ. ಲಾಠಿ ಮೈದಾನ, ಸ್ವರಾಜ್ಯ ಮೈದಾನ, ಸ್ವಾತಂತ್ರ್ಯ ಮೈದಾನವೆಂದು ಹೆಸರಾಗಿದ್ದ ಸುಬ್ಬರಾಯನ ಕೆರೆಯ ಐತಿಹಾಸಿಕ ಪ್ರಾಮುಖ್ಯತೆಯನ್ನು ಎತ್ತಿ ಹಿಡಿಯುವ ಪ್ರಯತ್ನ ಇದಾಗಿದೆ.

**ಸುಬ್ಬರಾಯನ ಕೆರೆ ಐತಿಹಾಸಿಕ ಹಿನ್ನೆಲೆ:**

ಮುಮ್ಮಡಿ ಕೃಷ್ಣರಾಜ ಒಡೆಯರ್‌ರ ಕಾಲದಲ್ಲಿ ಜನ ಮತ್ತು ಜಾನುವಾರುಗಳಿಗೆ ನೀರಿನ ಸೌಕರ್ಯ ಒದಗಿಸುವ ಸಲುವಾಗಿ ೧೮೬೫ರಲ್ಲಿ ಸುಬ್ಬರಾಯನ ಕಟ್ಟೆಯನ್ನು ನಿರ್ಮಿಸಲಾಯಿತು. ಅಲ್ಲಿ ಒಂದು ಕುಡಿಯುವ ನೀರಿನ ಬಾವಿಯೂ ಇತ್ತು. ೧೮೭೦–೭೫ರ ಹೊತ್ತಿಗೆ ಸುಬ್ಬರಾಯನ ಕಟ್ಟೆ ಕೆರೆಯಾಯಿತು. ಮುಮ್ಮಡಿ ಕೃಷ್ಣರಾಜ ಒಡೆಯರು ಹಾಗೂ ದಿವಾನ್ ರಂಗಾಚಾರ್ಲುರವರ ಸ್ನೇಹಿತರಾಗಿದ್ದ ಭಾಗವತ ಸುಬ್ಬರಾಯರು ಖಜಾನೆಯ



ಅಧಿಕಾರಿಯಾಗಿದ್ದರು. ಇವರು ಜನಾನುರಾಗಿಗಳು. ಬಡ ವಿದ್ಯಾರ್ಥಿಗಳಿಗೆ ವಾರಾನ್ನ, ನಿತ್ಯ ಅನ್ನದಾನದ ವ್ಯವಸ್ಥೆ ಮಾಡಿದ್ದರು. ದಿನಕ್ಕೆ ೧೦೦ ಜನರು ಊಟ ಮಾಡುತ್ತಿದ್ದರಂತೆ. ಈ ಕೆರೆಯನ್ನು ಕಟ್ಟಿಸಿದ್ದು ಇವರಾಗಿದ್ದರಿಂದ ಇದಕ್ಕೆ ಸುಬ್ಬರಾಯನ ಕೆರೆಯೆಂಬ ಹೆಸರು ಬಂದಿತು. ಕ್ರಮೇಣ ಈ ಕೆರೆಯು ಭಾಗವತ ಸುಬ್ಬರಾಯರ ಮಗ ಭಾಗವತ ಸುಬ್ಬಕೃಷ್ಣರಾವ್ ಸುಪರ್ದಿಗೆ ಒಳಪಟ್ಟಿತು. ೧೮೬೨ರಲ್ಲಿ ಮೈಸೂರು ಮುನ್ಸಿಪಾಲಿಟಿ ಅಸ್ತಿತ್ವಕ್ಕೆ ಬಂದಿತು. ೧೮೯೬ರಲ್ಲಿ ಭಾಗವತ ಸುಬ್ಬಕೃಷ್ಣರಾವ್ ಅವರಿಂದ ಮೈಸೂರು ಸರಕಾರ ಅಡಿಗೆ ಐದಾಣೆ ಆರು ಕಾಸಿನಂತೆ ರೂ. ೨೦೩೪/–ಗಳನ್ನು ಕೊಟ್ಟು ೫೮೧೩ ಚದುರಗಜದ ಈ ಕೆರೆಯ ಜಾಗವನ್ನು ಖರೀದಿಸಿತು. ಈ ವೇಳೆಗಾಗಲೆ ಸುಬ್ಬರಾಯನ ಕೆರೆಯಲ್ಲಿ ನೀರು ಬತ್ತಿ ನಿಷ್ಕ್ರಿಯಗೊಂಡಿತ್ತು. ಅಲ್ಲಿರುವ ಬಾವಿಯಲ್ಲಿಯೂ ನೀರು ಬತ್ತಿ ಹೋಗಿತ್ತು.

ಸುಬ್ಬರಾಯನ ಕೆರೆಯ ಬಳಿ ಸಮಾಜ ಸುಧಾರಕರಾಗಿದ್ದ ಅಂಬಳೆ ಅಣ್ಣಯ್ಯ ಪಂಡಿತರು ಬಡ ವಿದ್ಯಾರ್ಥಿಗಳಿಗಾಗಿ 'Poor Boys feeder Hostel' (೧೯೧೫) ನಿರ್ಮಿಸಿದ್ದರು. ನೂರಾರು ಬಡ ವಿದ್ಯಾರ್ಥಿಗಳಿಗೆ ಸಹಾಯ ಮಾಡುತ್ತಿದ್ದರು. ಅಂಬಳೆ ಅಣ್ಣಯ್ಯ ಪಂಡಿತರು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕನ್ನಡ ಉಪಾಧ್ಯಾಯರಾಗಿದ್ದರು. ಸಮಾಜ ಸುಧಾರಕರೂ, ಜನಾನುರಾಗಿಗಳೂ ಜನಪ್ರಿಯರಾಗಿದ್ದ ಅಂಬಳೆ ಅಣ್ಣಯ್ಯ ಪಂಡಿತರ ಹೆಸರನಲ್ಲಿ 'ಅಂಬಳೆ ಅಣ್ಣಯ್ಯ ಪಾರ್ಕ್' ಎಂಬ ಹೆಸರು ಬಂದಿತು. ಅದೇ ಹೆಸರಿನಲ್ಲಿ



ಇಂದಿಗೂ ಫಲಕವಿದೆ. ಆದರೆ ಜನ ಬಳಕೆಯಲ್ಲಿ ಇದು ಸುಬ್ಬರಾಯನಕೆರೆಯೆಂದೇ ಪ್ರಸಿದ್ಧವಾಯಿತು. ಸುಬ್ಬರಾಯನ ಕೆರೆಯ ಅಂಗಳದಲ್ಲಿ ಸ್ನಾನಕ್ಕೆ ಅನುಕೂಲವಾಗುವಂತೆ ಒಂದು ಕಲ್ಯಾಣಿಯನ್ನು ಹಾಗೂ ಮಧ್ಯ ಮಂಟಪವನ್ನು ಅಂಬಳೆ ಅಣ್ಣಯ್ಯ ಪಂಡಿತರು ಕಟ್ಟಿಸಿದ್ದರು.



ಸುಬ್ಬರಾಯನ ಕೆರೆಯು ಅಂದು ಕೆ. ಆರ್. ಮೊಹಲ್ಲಾಗೆ ಸೇರಿತ್ತು. ಸುಬ್ಬರಾಯನ ಕೆರೆಯು ನಾಲ್ಕು ಪ್ರಮುಖ ರಸ್ತೆಗಳಿಂದ ಸುತ್ತುವರಿದಿದೆ. ಪೂರ್ವಕ್ಕೆ ನಾರಾಯಣಶಾಸ್ತ್ರಿ ರಸ್ತೆ, ಪಶ್ಚಿಮಕ್ಕೆ ದಿವಾನ್ಸ್ ರಸ್ತೆ, ಉತ್ತರಕ್ಕೆ ಕಾಲೇಜು ರಸ್ತೆ, ದಕ್ಷಿಣಕ್ಕೆ ಚಾಮರಾಜ ಜೋಡಿ ರಸ್ತೆಯಿದೆ. ೧೮೮೬ರ ಹೊತ್ತಿಗೆ ಮಹಾರಾಜ ಕಾಲೇಜು ಅಸ್ತಿತ್ವಕ್ಕೆ ಬಂದ ಮೇಲೆ ಕಾಲೇಜು ರಸ್ತೆ ಅಭಿವೃದ್ಧಿ ಹೊಂದಿದೆ. ೧೯೨೫ರಲ್ಲಿ ಬಾಹುಸಾರ್ ಈಜು ಕೊಳವನ್ನು ೯ ವರ್ಷ ಗುತ್ತಿಗೆ ಆಧಾರದ ಮೇಲೆ ಸುಬ್ಬರಾಯನ ಕರೆಯಲ್ಲಿ ಸ್ಥಾಪಿಸಲಾಯಿತು. ದಿವಾನ್ಸ್ ರಸ್ತೆಯಿಂದ ಈಜುಕೊಳಕ್ಕೆ ಇಳಿಯಲು ಸೋಪಾನವಿತ್ತು. ಸ್ನಾನದ ಮನೆ, ಬಟ್ಟೆ ಬದಲಿಸಲು ಕೊಠಡಿಗಳನ್ನು ನಿರ್ಮಿಸಲಾಗಿತ್ತು. ಈಗ ಈಜುಕೊಳ ಇಲ್ಲ. ಅಂತೆಯೇ ಅಲ್ಲಿ



ಕೊಕ್ಕೋ ಹಾಗೂ ಬಾಸ್ಕೆಟ್ ಬಾಲ್ ಮೈದಾನವೂ ಇತ್ತು. ಸುಮಾರು ೫೦ ವರ್ಷಗಳ ಕಾಲ ಬ್ಯಾಸ್ಕೆಟ್ ಬಾಲ್–ಕೊಕ್ಕೋ ಆಡಿದರು. ಕಾರ್ಪೋರೇಷನ್‌ನ ಮಾಜಿ ಮೇಯರ್ ಆಗಿದ್ದ ಪ್ರಕಾಶ್ ಹಾಗೂ ಅವರ ತಂಡ ಇಲ್ಲೆ ಆಟವಾಡುತ್ತಿದ್ದರು. ಕೊನೆಗೆ ಅವರು ಏಕಲವ್ಯ ಪ್ರಶಸ್ತಿಗೆ ಭಾಜನರಾದರು. ಇಂದು ಸುಬ್ಬರಾಯನಕೆರೆ ಮೈಸೂರು ಕಾರ್ಪೊರೇಷನ್‌ಗೆ ಸೇರಿದೆ.



**ನೀರಿಗಾಗಿ ತೋಡಿಸಲ್ಪಟ್ಟ ಬಾವಿಯು ನಿಷ್ಕ್ರಿಯಗೊಂಡಿದ್ದು ಈಗ ಕ್ರಾಂತಿಕಾರರಾದ ಭಗತ್‌ಸಿಂಗ್ ಹಾಗೂ ಇತರರ ಪ್ರತಿಮೆಯನ್ನು ನಿರ್ಮಿಸಲಾಗಿದೆ.**





**ಸುಬ್ಬರಾಯನ ಕೆರೆಯ ಪಕ್ಕದ ರಸ್ತೆಯಾದ ನಾರಾಯಣಶಾಸ್ತ್ರೀ ರಸ್ತೆ ಮತ್ತು ದಿವಾನ್ಸ್ ರಸ್ತೆ**




**ಕಾಲೇಜು ರಸ್ತೆ, ೧೦೦ ಅಡಿ ರಸ್ತೆ ಮತ್ತು ಈಜುವ ಕೊಳಕ್ಕೆ ದಿವಾನ್ಸ್ ರಸ್ತೆಯಿಂದ ಸೋಪಾನವನ್ನು ನಿರ್ಮಿಸಿರುವ ದೃಶ್ಯ**



## ಮೈಸೂರಿನಲ್ಲಿ ಸ್ವಾತಂತ್ರ್ಯ ಹೋರಾಟದ ಆರಂಭದ ಹೆಜ್ಜೆಗಳು

ವೃದ್ಧ ಪಿತಾಮಹ ದಯಾಸಾಗರ ಎಂ. ವೆಂಕಟಕೃಷ್ಣಯ್ಯನವರು ತಾತಯ್ಯ ಎಂದೇ ಚಿರಪರಿಚಿತರು. ಆಡು ಮುಟ್ಟದ ಸೊಪ್ಪಿಲ್ಲ ಎಂಬಂತೆ ವೆಂಕಟ ಕೃಷ್ಣಯ್ಯನವರು ಸಾಧನೆಗೈಯದ ಕ್ಷೇತ್ರವೇ ಇಲ್ಲ. “ಶ್ರೀವಮಾನ್ ವೆಂಕಟಕೃಷ್ಣಯ್ಯನವರು, ದೇಶಪ್ರೇಮದಿಂದಲೂ, ಜನಪ್ರೇಮದಿಂದಲೂ ಈ ದೇಶದ ಎಲ್ಲ ಕ್ಷೇತ್ರಗಳಲ್ಲಿಯೂ ಆದರ್ಶವಾಗಿ ಕೆಲಸ ಮಾಡಿ, ಮುಂದಿನ ಪೀಳಿಗೆಗಾಗಿ ತಮ್ಮ ಕೆಲಸದ ಫಲಗಳನ್ನು ಬಿಟ್ಟು, ಅವರು ತಮ್ಮನ್ನು ಎಂದೆಂದಿಗೂ ನೆನೆಸಿಕೊಂಡು ಅನುಸರಿಸಬೇಕಾದ ಆದರ್ಶಗಳನ್ನು ಬಿಟ್ಟು ಹೋಗಿರುವುದೇ, ಶ್ರೀ ವೆಂಕಟಕೃಷ್ಣಯ್ಯನವರ ಹೆಸರು ಎಂದೆಂದಿಗೂ ಈ ದೇಶದ ಜನರಿಗೆ ಪ್ರಿಯವಾಗಲು ಕಾರಣವಾಗಿದೆ”–ಗೊರೂರು ರಾಮಸ್ವಾಮಿ ಅಯ್ಯಂಗಾರ್.

ಮೈಸೂರು ತಾತಯ್ಯ ವೆಂಕಟಕೃಷ್ಣಯ್ಯನವರು ಹೆಗ್ಗಡದೇವನ ಕೋಟೆಯ ಮಗ್ಗೆಹಳ್ಳಿಯಲ್ಲಿ ಜನಿಸಿದರು. ಚಿಕ್ಕ ವಯಸ್ಸಿನಲ್ಲೆ ತಂದೆಯವರು ಮರಣಹೊಂದಿದ ಮೇಲೆ ಇಬ್ಬರು ಸೋದರಿಯರ ಜೊತೆ ತಾಯಿಯೊಂದಿಗೆ ಮೈಸೂರಿನಲ್ಲಿ ನೆಲೆಸಿದರು. ಅರಮನೆಯ ಬಳಿಯಿರುವ ಸೌದೆಕೊಪ್ಪಲಿನಲ್ಲಿ ಇವರ ವಾಸ. ಬಾಲಕ ವೆಂಕಟಕೃಷ್ಣಯ್ಯ ಅಂದಿನ ಪ್ರಸಿದ್ಧ ಸಮಾಜ ಸುಧಾರಕರಾಗಿದ್ದ ಭಾಗವತ ಸುಬ್ಬರಾಯರ ಮನೆಯಲ್ಲಿ ವಾರಾನ್ನ ಮಾಡಿಕೊಂಡು, ವಿದ್ಯಾಭ್ಯಾಸ ಮುಂದುವರಿಸಿದರು. ಆರಂಭದಲ್ಲಿ ರಾಜಾ ಸ್ಕೂಲ್, ನಂತರ ವೆಸ್ಲಿಯನ್ ಮಿಷನ್ ಹೈಸ್ಕೂಲ್‌ನಲ್ಲಿ ವಿದ್ಯಾಭ್ಯಾಸ ಮಾಡಿದರು. ೧೮೭೩ರಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಉದ್ಯೋಗಕ್ಕಾಗಿ ಬಹಳ ಕಷ್ಟಪಟ್ಟರು. ಇವರ ವಿದ್ವತ್ತಿನಿಂದ ದಿವಾನ್ ಸಿ. ರಂಗಾಚಾರ್ಲು ಆಕರ್ಷಿತರಾದರು. ೧೮೭೫ರಲ್ಲಿ ಮರಿಮಲ್ಲಪ್ಪ ಶಾಲೆಯಲ್ಲಿ ಸಹಾಯಕ ಉಪಾಧ್ಯಾಯರಾಗಿ ನೇಮಕಗೊಂಡರು. ಅವರ ಸಂಬಳ ತಿಂಗಳಿಗೆ ೧೦ ರೂಪಾಯಿಗಳು. ಉಪಾಧ್ಯಾಯರಾಗಿ ವೆಂಕಟಕೃಷ್ಣಯ್ಯನವರು ಅನೇಕ ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ಚಳುವಳಿಗೆ ಧುಮುಕಲು ಪ್ರೇರೇಪಿಸಿದರು.

ತಾತಯ್ಯನವರಿಗೂ ಮುನ್ನ ೧೮೭೬ರಲ್ಲಿ ಸ್ಥಾಪನೆಯಾದ ‘Literary Union’ ಅಕೆಡೆಮಿಕ್ ಚರ್ಚೆಯ ವೇದಿಕೆಯಾಗಿತ್ತು. ತಾತಾ ತೋತಾಪುರಿ ಅವರು ಇಂದು ಗರುಡ ಮಾಲ್ ಹಿಂಭಾಗದಲ್ಲಿರುವ ಸುಬ್ರಮಣ್ಯ ದೇವಸ್ಥಾನದಲ್ಲಿ

ಈ 'ಸಾಹಿತ್ಯ ಸಂಘ'ವನ್ನು ಸ್ಥಾಪಿಸಿದರು. ಕ್ರಮೇಣ ಇದು ಪುರಸಭೆಗೆ ವರ್ಗಾಯಿಸಲ್ಪಟ್ಟಿತು. ಈ ಸಾಹಿತ್ಯ ಸಂಘ ವಿಶ್ವದ ಶ್ರೇಷ್ಠ ಚಿಂತಕರ ವಿಚಾರ ಧಾರೆಗಳನ್ನೂ ಚರ್ಚಿಸುವ ಮೂಲಕ ಬುದ್ಧಿ ಜೀವಿಗಳ ವರ್ಗದಲ್ಲಿ ಆಧುನಿಕ ಚಿಂತನೆಗಳನ್ನು ಬಿತ್ತಿತು. ವೆಂಕಟಕೃಷ್ಣಯ್ಯನವರು ಮರಿಮಲ್ಲಪ್ಪ ಶಾಲೆಯ ಮುಖ್ಯೋಪಾಧ್ಯಾಯರಾದ ಮೇಲೆ ತರಗತಿಗಳಲ್ಲಿ ನಿರ್ಭಿಢೆಯಿಂದ ದಾದಾಭಾಯಿ ನವರೋಜಿ, ಗೋಖಲೆ, ತಿಲಕರ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸುತ್ತಿದ್ದರು. ಇದರೊಂದಿಗೆ ಗ್ಲಾಡ್‌ಸ್ಟನ್, ವಾಷಿಂಗ್ಟನ್, ಜೆ. ಎಸ್. ಮಿಲ್, ಸ್ಪೆನ್ಸರ್ ಮುಂತಾದವರ ಚಿಂತನೆಗಳ ಬಗ್ಗೆಯೂ ವಿವರಿಸುತ್ತಿದ್ದರು. ಈ ರೀತಿ ತರಗತಿಗಳಲ್ಲಿ ವಿದ್ಯಾರ್ಥಿಗಳಲ್ಲಿ ಸ್ವಾತಂತ್ರ್ಯದ ಬಗ್ಗೆ ಪ್ರೀತಿ ಹುಟ್ಟಿಸಿದರು. ಪತ್ರಕರ್ತರಾಗಿ (ಸಾಧ್ವಿ–ಸಂಪದಭ್ಯುದಯ), ಸಮಾಜ ಸೇವಕರಾಗಿ (ಅನಾಥಾಲಯ) ಮಹಿಳಾ ಪರ ಚಿಂತಕರಾಗಿ (ಮಹಿಳಾ ಶಿಕ್ಷಣದ ಪ್ರಚಾರಕರು) ಮೈಸೂರಿನ ತಾತಯ್ಯ ವೆಂಕಟಕೃಷ್ಣಯ್ಯ ಮುಂದಿನ




Standing : (L to R) : Messrs C. Vasudeva Rao, T. S. Subba Rao, Siddalinga Devaru, R. K. Naidu, K. Lakshmiah, G. R. Josyer, M.A., F.R.E.S. (Gen Secretary), S. Satyamurthy, M.L.C., V. Manickyavelu Mudaliar (President), M. Venkatakrishnayya (Chairman R. C.), B. Narasinga Rao, A. R. Srikanta Sarma, C. R. Nagaraja Rao, Pandit Chandrabhan Singh.
Sitting : 1st Row : Messrs (3rd Fig) P. Sitaramiah, B.A., B.L., Y. K. Nanjundiah, K. Krishnaswamy Rao, B.A., B.L., Sundara Rao, B.A., LL.B., V. T. Arumugam Mudaliar, V. S. Krishnaswamy Iyer.
IInd Row : Messrs (2nd Fig) G. Ramachandra Setty, Gundo Rao Khatre, (4th) P. R. Ramiah, B.Sc., Hosakoppa Krishna Rao, Y. B. Raghavendrachar, B.A., D. Narasimha Sastry, M.A., R. Venkataramiah, B.A. Tagadur Ramachandra Rao.



ತಲೆಮಾರಿನ ಸ್ವಾತಂತ್ರ್ಯ ಹೋರಾಟಗಾರರ ಹೋರಾಟದ ಹುಟ್ಟಿಗೆ ಕಾರಣಕರ್ತರಾಗಿದ್ದಾರೆ.

"ಅರ್ಧಶತಮಾನಕ್ಕೂ ಮೀರಿ ಮೈಸೂರು ರಾಜ್ಯದಲ್ಲಿ ಸಾಮಾಜಿಕ, ರಾಜಕೀಯ ಕ್ಷೇತ್ರಗಳ ಬೆಳವಣಿಗೆಗಾಗಿ, ತಮ್ಮದೇ ಆದ ರೀತಿ ನೀತಿ ಮತ್ತು ಕಾರ್ಯಕ್ರಮಗಳಿಂದ ಜನ ಸೇವೆ ಮಾಡಿ, ಸಮಾಜ ಮತ್ತು ಈ ರಾಷ್ಟ್ರದ ಪ್ರಗತಿಯ ಕೈದೀಪ ತೋರಲು ಅರ್ಹರೂ, ಹಾಗೂ ಏಕೈಕ ಮಹಾ ನಾಯಕರೂ ಆಗಿದ್ದ ತಾತಯ್ಯನವರು ತಮ್ಮದೇ ಆದ ರೀತಿಯಲ್ಲಿ ಜನಜಾಗೃತಿಯ ಚಳುವಳಿಗಳನ್ನು ಮಾಡುತ್ತಿದ್ದರು". ೧೯೨೦–೩೦ರ ಅವಧಿಯಲ್ಲಿ ಇಡೀ ಮೈಸೂರು ರಾಜ್ಯದಲ್ಲಿ ರಾಜಕೀಯ ಜಾಗೃತಿಯಲ್ಲಿ ನಿರತರಾಗಿದ್ದ ತಾತಯ್ಯನವರು ಕೆಲವು ಯುವಕರನ್ನು ಆಯ್ಕೆ ಮಾಡಿ ಅವರಿಗೆ ರಾಷ್ಟ್ರ ಹೋರಾಟದ ಚೈತನ್ಯ ತುಂಬಿದರು.

ತಾತಯ್ಯನವರ ಗರಡಿಯಲ್ಲಿ ಪಳಗಿದ ಆರಂಭದ ಈ ಧೀಮಂತ ನಾಯಕರೆಂದರೆ ತಗಡೂರು ರಾಮಚಂದ್ರರಾಯರು. ಅಗರಂರಂಗಯ್ಯ ಹಾಗೂ ಎಂ. ಎನ್. ಜೋಯಿಸ್. ಈ ಮೂವರನ್ನು ಮೈಸೂರು ಕಾಂಗ್ರೆಸ್‌ನ ಸಂಸ್ಥಾಪಕತ್ರಯರೆನ್ನುತ್ತಾರೆ.

ಶ್ರೀ ಅಗರಂರಂಗಯ್ಯನವರು ೧೯೨೨ರಲ್ಲಿ ಮದನಪಲ್ಲಿಯ ರಾಷ್ಟ್ರೀಯ ವಿದ್ಯಾಶಾಲೆಯಲ್ಲಿ ರಾಜಕೀಯ ಶಿಕ್ಷಣ ಪಡೆದು ಮೈಸೂರಿಗೆ ಬಂದರು. ಜನಸೇವೆ ಮಾಡಲು ಇವರಿಗಿದ್ದ ಉತ್ಸಾಹ, ಹುಮ್ಮಸ್ಸು, ತ್ಯಾಗ ಮನೋಭಾವ ಅವರ್ಣನೀಯ. ಅಂತೆಯೇ ಮತ್ತೊಬ್ಬ ಅಪ್ರತಿಮ ನಾಯಕ ತಗಡೂರು ರಾಮಚಂದ್ರರಾವ್. ಇವರ ಶ್ರೇಷ್ಠ ವ್ಯಕ್ತಿತ್ವದ ಬಗ್ಗೆ ಒಮ್ಮೆ ಕೃಷ್ಣರಾವ್ ಮುದನೀಡಕರರು ಭಾಷಣ ಮಾಡುತ್ತಾ ಹೀಗೆ ಹೇಳಿದ್ದಾರೆ – "ನಾನು ನೆನ್ನೆ ಮೈಸೂರಿನಲ್ಲಿ ಮಹಾವಿಭೂತಿ ಪುರುಷರೊಂದಿಗೆ ಮಾತನಾಡುವ ಶ್ರೇಷ್ಠ ಅವಕಾಶ ದೊರಕಿತು. ಅವರು ಕಠೋರ ಸತ್ಯಾಗ್ರಹಿಗಳು; ಶುದ್ಧ ಬುದ್ಧ ಸತ್ಯಾಗ್ರಹಿಗಳು: ಹಿಂದೂಸ್ಥಾನಕ್ಕೆ ಸ್ವರಾಜ್ಯ ಸಾಧಿಸಬೇಕೆಂಬ ವಿಚಾರಕ್ಕೂ ಬಹು ಮುಂದೆ ಹೋಗಿ ಹಳ್ಳಿ ಹಳ್ಳಿಗೆ ಸ್ವರಾಜ್ಯ ಸಿದ್ಧಿಸಬೇಕೆಂಬ; ವ್ಯಕ್ತಿ ವ್ಯಕ್ತಿಗೆ ಸ್ವರಾಜ್ಯ ಅನುಭವ, ಆನಂದ ದಕ್ಕಬೇಕೆಂಬ ಉದಾತ್ತ ವಿಚಾರಗಳ ಸ್ಫೋಟಕಗಣಿ ಈ ಮಹಾವ್ಯಕ್ತಿ ಅವರ ಹೆಸರು ತಗಡೂರು ರಾಮಚಂದ್ರರಾಯರು". ಅಂತೆಯೇ

ಸಿಂಹಗರ್ಜನೆಯ ಮತ್ತೊಬ್ಬ ಮಹಾನಾಯಕರು ಎಂ. ಎನ್. ಜೋಯಿಸ್. ಎಂ. ಎನ್. ಜೋಯಿಸರು ೧೯೨೦ ರಿಂದಲೂ ತಗಡೂರರು ಮತಾಂತರಗಳ ವಿರುದ್ಧ ನಡೆಸಿದ ಚಳುವಳಿ, ಹರಿಜನ ಹಾಗೂ ಕಣಿಯರ ಪರವಾಗಿ ನಡೆಸಿದ ಚಳುವಳಿ, ಖಾದಿ ಪ್ರಚಾರ, ಸೇವಾದಳದ ಚಟುವಟಿಕೆ ಮುಂತಾದ ಕಾರ್ಯಗಳಲ್ಲಿ ಜೋಯಿಸರು ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ೧೯೨೦ರ ಸುಮಾರಿಗೆ ಸ್ಥಾಪಿತವಾದ ತಿಲಕ್ ಸಂಘದ ಚಟುವಟಿಕೆಗಳಲ್ಲೂ ಸಕ್ರಿಯವಾಗಿದ್ದರು.

ವಿದ್ಯಾಭ್ಯಾಸವನ್ನು ಮುಗಿಸಿದ ಆರಂಭದಲ್ಲಿ ನಡೆದ ಘಟನೆಯೊಂದು ಎಂ. ಎನ್. ಜೋಯಿಸರ ಮೇಲೆ ಅಪಾರ ಪ್ರಭಾವ ಬೀರಿತು. ಮರಿಮಲ್ಲಪ್ಪ ಶಾಲೆಯ ಮುಂದಿನ ರಸ್ತೆಯಲ್ಲಿ ವಿದ್ಯಾರ್ಥಿಗಳ ಮೆರವಣಿಗೆಯ ಮೇಲೆ ಪೋಲೀಸರು ಲಾಠಿ ಪ್ರಯೋಗ ಮಾಡಿದ್ದು ಜೋಯಿಸರ ಮನಸ್ಸಿನ ಮೇಲೆ ತೀವ್ರ ಪರಿಣಾಮ ಬೀರಿತು. ನಡುಹಗಲಿನಲ್ಲಿ ಎಲ್ಲರ ಎದುರಿಗೆ ನಡೆದ ಈ ದೌರ್ಜನ್ಯ ಕೃತ್ಯವನ್ನು ನಡೆಯಲೇ ಇಲ್ಲವೆಂದು ಅಧಿಕಾರಿಗಳು ಘೋಷಿಸಿದಾಗ ಜೋಯಿಸರಿಗೆ ಅಪಾರ ಆಕ್ರೋಶ ಉಂಟಾಯಿತು.

ಇದೇ ರೀತಿ ಲಾಠಿ ಪ್ರಹಾರದಲ್ಲಿ ಬಲವಾಗಿ ಪೆಟ್ಟು ತಿಂದ ಹರಿದಾಸರಾದ ಹೈದರಾಬಾದ್ ರಾಮದಾಸ್ ಎಂಬ ಭಕ್ತರೊಬ್ಬರು ಅಪಾರ ನೋವಿಗೀಡಾಗಿದ್ದರು. ಅವರು ಸುಬ್ಬರಾಯನ ಕೆರೆಯ ಒಂದು ಮೂಲೆಯಲ್ಲಿ ಶ್ರೀರಾಮ ದೇವಾಲಯವನ್ನು ನಿರ್ಮಿಸಿ ಅಲ್ಲಿ ದೇವರ ಸೇವೆ ಮಾಡುತ್ತಾ ಒಬ್ಬರೇ ವಾಸಿಸುತ್ತಿದ್ದರು. ಅದೇ ಇಂದಿನ ರಾಘವೇಂದ್ರ ಸ್ವಾಮಿ ಮಠ. ರಾಮದಾಸರು ಹಾಗೂ ಇನ್ನೂ ಕೆಲವು ನಾಯಕರು ನಗರದ ಶಾಲಾ ಕಾಲೇಜು ವಿದ್ಯಾರ್ಥಿವೃಂದವನ್ನು ಸೇರಿಸಿ ಮೆರವಣಿಗೆ ಮಾಡಿ ಸುಬ್ಬರಾಯನ ಕೆರೆಯಲ್ಲಿ ಪ್ರತಿಭಟನಾ ಪ್ರದರ್ಶನ ಮತ್ತು ಭಾಷಣಗಳನ್ನು ನಡೆಸಲು ಆರಂಭಿಸಿದರು. ಸುಬ್ಬರಾಯನ ಕೆರೆ ಚಳುವಳಿಗಳ ಕೇಂದ್ರವಾಯಿತು. ಎಂ. ಎನ್. ಜೋಯಿಸರ ಸಾರ್ವಜನಿಕ ಚಟುವಟಿಕೆಗಳಿಗೆ ಇದು ಒಂದು ಪೀಠಿಕೆಯಾಯಿತು.

ಅದುವರೆಗೆ ಟೌನ್‌ಹಾಲ್ ಮೈದಾನದಲ್ಲಿ ನಡೆಯುತ್ತಿದ್ದ ಎಲ್ಲಾ ಸಭೆ, ಸಮಾರಂಭ, ಪ್ರದರ್ಶನ, ಚಟುವಟಿಕೆಗಳು ಸುಬ್ಬರಾಯನಕೆರೆ ಮೈದಾನಕ್ಕೆ ವರ್ಗಾಯಿಸಲ್ಪಟ್ಟವು. ಸುಬ್ಬರಾಯನ ಕೆರೆಗೆ ಲಾಠಿ ಮೈದಾನ, ಸ್ವರಾಜ್ಯ ಮೈದಾನ,



ಸ್ವಾತಂತ್ರ್ಯ ಮೈದಾನ ಮುಂತಾದ ಹೆಸರುಗಳು ಕೊಡಲ್ಪಟ್ಟವು. ಎಲ್ಲಾ ಆಂದೋಲನಗಳಿಗೂ ಇದು ಕೇಂದ್ರ ಸ್ಥಾನವಾಯಿತು.

ಕಾಂಗ್ರೆಸ್ ಕಾರ್ಯದರ್ಶಿಯಾಗಿದ್ದ ಅಗರಂ ರಂಗಯ್ಯನವರು ಕಾರ್ಯದರ್ಶಿ ಸ್ಥಾನವನ್ನು ಜೋಯಿಸರಿಗೆ ಬಿಟ್ಟುಕೊಟ್ಟರು. 'ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ'ಯ ಕಾರ್ಯದರ್ಶಿಗಳಾದ ಮೇಲೆ ಜೋಯಿಸರ ಮನೆಯೇ ಕಾಂಗ್ರೆಸ್ ಕಛೇರಿಯ ತಾಣವಾಯಿತು. ಇದರಿಂದಾಗಿ ಸುಬ್ಬರಾಯನಕೆರೆ ಎಲ್ಲಾ ಚಟುವಟಿಕೆಗಳ ಕೇಂದ್ರ ಸ್ಥಳವಾಗಲು ಅನುಕೂಲವಾಯಿತು. ಏಕೆಂದರೆ ಸುಬ್ಬರಾಯನ ಕೆರೆಯ ನಾಲ್ಕೂ ಏರಿಗಳ ಮೇಲೆ ಅಂದಿನ ಪ್ರಮುಖ ಜನನಾಯಕರಾಗಿದ್ದ ರಂಗರಾಮಯ್ಯ, ಅಗರಂರಂಗಯ್ಯ, ವಕೀಲ ಮಾಧವರಾವ್, ಸತ್ಯನಾರಾಯಣರಾವ್, ವಕೀಲ ಶ್ರೀರಂಗಾಚಾರ್ಯ ಮುಂತಾದವರ ಮನೆಗಳು ಕೋಟೆಯಂತೆ ಸುತ್ತುವರಿದಿದ್ದವು. ತಾತಯ್ಯನವರು ಸ್ಥಾಪಿಸಿದ ಅನಾಥಾಲಯ ಒಂದು ಪಕ್ಕಕ್ಕೆ ಇತ್ತು. ಇದರಿಂದ ವಿದ್ಯಾರ್ಥಿಗಳು ಸಮರಕ್ಕೆ ನುಗ್ಗಲು ಅನುಕೂಲವಾಗಿತ್ತು. 'ಸಾರ್ವಜನಿಕಾಭಿಪ್ರಾಯವನ್ನು ರಾಷ್ಟ್ರೀಯ ಸಮರದೆಡೆಗೆ ಸೆಳೆಯುತ್ತಿದ್ದ ಈ ಸುಬ್ಬರಾಯನ ಕೆರೆಯ ಸುತ್ತಲಿನ ಕೋಟೆ ಹೋರಾಟಗಾರರಿಗೆ ಒಂದು ಸುಭದ್ರ ನೆಲೆಯಾಗಿ ಧೈರ್ಯಸಾಹಸಗಳನ್ನು ತುಂಬಿಕೊಳ್ಳಲು ನೆರವಾಯಿತು'. ಜೋಯಿಸರ ಮನೆ ತೆರೆದಿಟ್ಟ ಅತಿಥಿ ಗೃಹ. ಹೀಗಾಗಿ ಸುಬ್ಬರಾಯನ ಕೆರೆ ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಮೈಸೂರಿನಲ್ಲಿ ಮುಂಚೂಣಿಗೆ ಬರಲು ಸಾಧ್ಯವಾಯಿತು.

## ಉಪ್ಪಿನ ಸತ್ಯಾಗ್ರಹ

೧೯೩೦ರ ಉಪ್ಪಿನ ಸತ್ಯಾಗ್ರಹ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಒಂದು ಮೈಲಿಗಲ್ಲು. ಅದರ ಪ್ರಭಾವ ಕರ್ನಾಟಕದಲ್ಲೂ ಮೂಡಿತು. ಉತ್ತರ ಕರ್ನಾಟಕದ ಸಿರಸಿ, ಸಿದ್ದಾಪುರ, ಅಂಕೋಲಾಗಳಲ್ಲೂ ಚಳುವಳಿ ಬಿರುಸಿನಿಂದ ನಡೆಯಿತು. ಆರ್. ಆರ್. ದಿವಾಕರ್, ಶ್ರೀನಿವಾಸರಾವ್ ಕೌಜಲಗಿ ಮುಂತಾದ ಪ್ರಮುಖರ ಬಂಧನವಾಯಿತು. ಸಾವಿರಾರು ಸ್ವಯಂ ಸೇವಕರ ಬಂಧನವಾಯಿತು. ಆಗ ಮೈಸೂರು ಕಾಂಗ್ರೆಸ್ಸು ಒಂದು ಗುಪ್ತ ಸಮಿತಿಯನ್ನು ನೇಮಿಸಿತು. ನಿಟ್ಟೂರು ಶ್ರೀನಿವಾಸರಾವ್, ಎಸ್. ವೆಂಕಟಪತಯ್ಯ, ಎಸ್. ಕೆ. ವೆಂಕಟರಂಗೈಯ್ಯಂಗಾರ್ ಆ ಸಮಿತಿಯ ಮುಖ್ಯಸ್ಥರು. ಈ ಸಮಿತಿ ಜೋಯಿಸರಿಗೆ ಕಾರವಾರ ಜಿಲ್ಲೆಯಲ್ಲಿ

ಹೋಗಿ ಕೆಲಸ ಮಾಡುವಂತೆ ಆದೇಶ ನೀಡಿತು. ಕಾಂಗ್ರೆಸ್ಸಿನ ಇತರ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿದ್ದ ಜೋಯಿಸರಿಗೆ ಹೋರಾಟದಲ್ಲಿ ಮೊಟ್ಟ ಮೊದಲ ಬಾರಿ ಭಾಗವಹಿಸುವ ಅವಕಾಶ ದೊರೆಯಿತು. ಮುಂದೆ ಸ್ವಾತಂತ್ರ್ಯ ಬರುವವರೆಗೂ ಜೋಯಿಸರು ಇಟ್ಟ ಹೆಜ್ಜೆ ಹಿಂದೆಗೆಯಲ್ಲಿಲ್ಲ.

ಸಿರಸಿ, ಸಿದ್ದಾಪುರ, ಅಂಕೋಲಾ ಸತ್ಯಾಗ್ರಹಗಳು ಕರ್ನಾಟಕದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಒಂದು ಪ್ರಮುಖ ಘಟ್ಟ. ಕರನಿರಾಕರಣೆ ಚಳುವಳಿ, ಕಾನೂನುಭಂಗ ಚಳುವಳಿಗಳು ಈ ಪ್ರದೇಶಗಳಲ್ಲಿ ಉಗ್ರರೂಪ ತಳೆಯಿತು. ಜನತೆ ಆನಂದೋತ್ಸಾಹದಿಂದ ಚಳುವಳಿಗಳಲ್ಲಿ ಪಾಲ್ಗೊಂಡಿತ್ತು. ಅಂಕೋಲಾದ ಉಪ್ಪಿನ ಸತ್ಯಾಗ್ರಹದೊಡನೆಯೇ ಸಿರಸಿ, ಸಿದ್ದಾಪುರಗಳಲ್ಲಿ ಜಂಗಲ್ ಸತ್ಯಾಗ್ರಹ ಮತ್ತು ಹುಲ್ಲ ಬನ್ನಿ ಸತ್ಯಾಗ್ರಹ ನಡೆದಿತ್ತು. ಮೊದಲು ಜೋಯಿಸರ ಕೆಲಸ ಸಿರಸಿ, ಸಿದ್ದಾಪುರಗಳಲ್ಲಿ ಇತ್ತು. ಕರ ಪತ್ರಗಳನ್ನು ಬರೆದು ಅಚ್ಚು ಹಾಕುವುದು, ಟಪಾಲಿನ ವ್ಯವಸ್ಥೆ ನೋಡಿಕೊಳ್ಳುವುದು ಅವರ ಕೆಲಸ. ಹೆಜ್ಜೆ ಹೆಜ್ಜೆಗೂ ಹುಡುಕುತ್ತಿದ್ದ ಪೊಲೀಸರಿಂದ ತಪ್ಪಿಸಿಕೊಂಡು ಗುಪ್ತವಾಗಿ ಕೆಲಸ ನಿರ್ವಹಿಸಬೇಕಾಗುತ್ತಿತ್ತು. ಅಂಕೋಲಾದಲ್ಲಿ ಕೆಲಸ ಮಾಡುತ್ತಿದ್ದ ಬೆಂಗಳೂರಿನ ವಿ. ಎಸ್. ನಾರಾಯಣರಾಯರ ಬಂಧನವಾದ ಮೇಲೆ ಜೋಯಿಸರು ಅಂಕೋಲಗೆ ಹೋಗಬೇಕಾಯಿತು.

ಜೋಯಿಸರು ವಿವರಿಸುವಂತೆ ಅಂಕೋಲಾ ಸತ್ಯಾಗ್ರಹ ಒಂದು ಸ್ವಾರಸ್ಯಕರ ಘಟ್ಟ. ಅಂಕೋಲಾ ಘಟ್ಟದ ಕೆಳಗಿನ ಸೀಮೆ. ಅಲ್ಲಿ ಜಂಗಲ್ ಸತ್ಯಾಗ್ರಹ, ಕರನಿರಾಕರಣೆ ಮೆರವಣಿಗೆಗಳು, ಪ್ರತಿಭಟನಾ ಸಭೆಗಳ ಜೊತೆಗೆ ಸಮುದ್ರ ತೀರದಲ್ಲಿ ಸುಂಕ ಕೊಡದೆ ಉಪ್ಪು ಮಾಡಿ ತರುವ ಚಳುವಳಿಯೂ ಭರದಿಂದ ಸಾಗಿತ್ತು. ಯಥಾ ಪ್ರಕಾರ ಪೊಲೀಸರ ಆಟಾಟೋಪ ತಪ್ಪಿಸಲು ಗುಪ್ತ ಕೆಲಸ, ಸತ್ಯಾಗ್ರಹಿಗಳ ಬಿಡಾರ ಕಾಡಿನಲ್ಲಿ ನಡೆಯುತ್ತಿತ್ತು. ಪೊಲೀಸರ ಕಣ್ಣುತಪ್ಪಿಸಲು ಮರದ ಮೇಲಿನ ಅಟ್ಟಣೆಗಳ ಮೇಲೆ ಕೆಲಸ ಸಾಗುತ್ತಿತ್ತು. ಕರಪತ್ರ ಯಂತ್ರಗಳನ್ನು ಕೊರಕಲುಗಳಲ್ಲಿ ದೋಣಿಗಳಲ್ಲಿ ಅಡಗಿಸಿಟ್ಟು ಕೆಲಸ ನಡೆಸುತ್ತಿದ್ದರು. ಕಾಡಿನಿಂದ ಸೌದೆ ಹೊತ್ತು ಮಾರುವ ಹೆಂಗಸರು, ದನಕಾಯುವ ಮಕ್ಕಳು ಸುದ್ದಿ ತರುವ ಕಾಗದ ಪತ್ರಗಳನ್ನು ಒಯ್ಯುವ ಅಂಚೆ ಸಿಬ್ಬಂದಿಗಳು, ಅವುಗಳಲ್ಲಿ ಬಿಡಾರಗಳ ಕ್ರಮಸಂಖ್ಯೆ ಇರುತ್ತಿತ್ತು. ಆ ಅಂಚೆಯನ್ನು ಮರದ



ಬುಡದಲ್ಲೋ, ಪೊದೆಯಲ್ಲೋ ಅಥವಾ ಭೂಮಿಯಲ್ಲೋ ಹುದುಗಿಸಿಡುತ್ತಿದ್ದರು. ಅವುಗಳನ್ನು ಸತ್ಯಾಗ್ರಹಿಗಳು ತೆಗೆದುಕೊಂಡು ಉತ್ತರ ಅಲ್ಲೇ ಅಡಗಿಸಿಡುವುದು ಪದ್ಧತಿ.

ಅಂಕೋಲಾದ ಪಕ್ಕದ ತಾಲ್ಲೂಕಾದ ಯಲ್ಲಾಪುರದ ಜನತೆ ಚಳವಳಿಗೆ ಸೇರುವ ಇಚ್ಛೆಯನ್ನು ಜೋಯಿಸರಲ್ಲಿ ವ್ಯಕ್ತಪಡಿಸಿದರು. ಜೋಯಿಸರು ಅವರಿಗೆ ಮುಂದಿನ ಕಾರ್ಯಕ್ರಮದ ಬಗ್ಗೆ ವಿವರಣೆ ನೀಡಬೇಕೆಂದು ಯಲ್ಲಾಪುರಕ್ಕೆ ಹೋಗಿ ಹಿಂತಿರುಗುತ್ತಿದ್ದಾಗ ಅವರ ಬಂಧನವಾಯಿತು.

ಜೋಯಿಸರನ್ನು ಬಂಧಿಸಿ ಪೊಲೀಸ್ ಸೂಪರಿಂಟೆಂಡೆಂಟರ ಬಳಿ ಕರೆದೊಯ್ದರು. ಅವರು ಜೋಯಿಸರಿಗೆ ನೀವು ಗುಪ್ತವಾಗಿ ಕೆಲಸ ಮಾಡಿ ಗಾಂಧೀ ಸತ್ಯಾಗ್ರಹದ ಆದರ್ಶಕ್ಕೆ ವಿರುದ್ಧ ನಡೆದಿದ್ದೀರಿ ಎಂದು ಕೊಂಕಾಡಿದರು. ಆಗ ಜೋಯಿಸರ ಪಾಟೀ ಸವಾಲು "ಆಡಳಿತಗಾರರಿಗೆ ನೀವು ಕಾನೂನಿನ ಪ್ರಕಾರ ತಪ್ಪು ಮಾಡಿದವರಿಗೆ ಅದೇ ಕಾನೂನಿನ ಪುಸ್ತಕದಲ್ಲಿ ಹೇಳಿರುವ ಶಿಕ್ಷೆಯ ವಿಧಿಕ್ರಮವನ್ನು ಪಾಲಿಸದೇ ಕಾನೂನನ್ನು ಉಲ್ಲಂಘಿಸಿ ಸತ್ಯಾಗ್ರಹಿಗಳನ್ನು ಹೊಡೆಯುವುದು, ಬಡಿಯುವುದು, ಬೂಟುಗಾಲಿನಲ್ಲಿ ತುಳಿಯುವುದು ಹೀಗೆಲ್ಲ ಮಾಡುತ್ತಿರುವುದು ಪಾರ್ಲಿಮೆಂಟಿಗೆ ಅಪಚಾರವಲ್ಲವೆ? ಗುರಿ ಮುಟ್ಟಲು ಒಂದು ಮಾರ್ಗ, ಸಾಧನ ಅವಶ್ಯಕ. ಆ ಮಾರ್ಗದಲ್ಲಿ ಹೋಗುವಾಗ ಎಡರು ತೊಡರುಗಳನ್ನು ದಾಟಲು ತನ್ನ ಸ್ವಂತ ಬುದ್ಧಿ ಶಕ್ತಿಯನ್ನು ಅವಲಂಬಿಸುತ್ತಾನೆ" ಸೂಪರಿಂಟೆಂಡೆಂಟ್ ಕಾಲಿನ್ಸ್ ಪೊಲೀಸರಿಗೆ ಜೋಯಿಸರನ್ನು ಸರಿಯಾಗಿ ನೋಡಿ ಕೊಳ್ಳುವಂತೆ ಆಜ್ಞೆ ಮಾಡಿದರು.

ಕಾರವಾರ ಜೈಲಿನಲ್ಲಿ ಜೋಯಿಸರಿಗೆ ೧೮ ತಿಂಗಳ ಕಾರಾಗೃಹವಾಸ. ಆಗ ರಾಜಕೀಯ ಕೈದಿಗಳಿಗೂ ಇತರ ಕೈದಿಗಳಿಗೂ ವ್ಯತ್ಯಾಸವಿರಲಿಲ್ಲ. ತೋಟ ಅಗೆಯುವುದು, ರಸ್ತೆ, ಕೆಲಸ, ಕಕ್ಕಸು ಬಳಿಯುವುದು ಎಲ್ಲವನ್ನೂ ಮಾಡಬೇಕಾಗಿತ್ತು. ಕಾರವಾರದಲ್ಲಿ ರಸ್ತೆ ರೋಲರನ್ನು ಎತ್ತಿಗೆ ಬದಲಾಗಿ ಕೆಲವು ಕೈದಿಗಳು ಎಳೆಯ ಬೇಕಾಗಿತ್ತು. ಆ ಕೆಲಸ ಜೋಯಿಸರಿಗೆ ಬಿತ್ತು. ಸ್ವಲ್ಪ ಕಾಲದ ನಂತರ ಅಹಮದ್‌ನಗರ ಜಿಲ್ಲೆಯ ವಿಸಾಪುರ ಜೈಲಿಗೆ ಜೋಯಿಸರನ್ನು ವರ್ಗಾಯಿಸಿದರು. ಅಲ್ಲಿ ಬಹಳ ಕಠಿಣ ಶಿಕ್ಷೆಗಳು, ಸಣ್ಣ ತಪ್ಪುಗಳಿಗೆ ಛಡಿ ಏಟು ಅನುಭವಿಸಬೇಕಾಯಿತು. ಇದರಿಂದಾಗಿ ರಾಜಕೀಯ ಕೈದಿಗಳು ಬಂಡಾಯ

ಹೂಡಿದರು. ಅದರ ಫಲವಾಗಿ ಕೈದಿಗಳದೇ ಒಂದು ಸಮಿತಿ ಮಾಡಿ ಅವರೇ ಪೂರ್ಣ ಜೈಲಿನ ಆಡಳಿತ ನೋಡಿಕೊಳ್ಳಬೇಕಾಯಿತು. ಜೋಯಿಸರು ಆ ಸಮಿತಿ ಸದಸ್ಯರಾಗಿದ್ದರು. ಪೂರ್ಣಾವಧಿ ಶಿಕ್ಷೆ ಅನುಭವಿಸಿ ಬಿಡುಗಡೆ ಹೊಂದಿ ಜೋಯಿಸರು ಮೈಸೂರಿಗೆ ಹಿಂತಿರುಗಿದರು. ೧೯೩೩ರಲ್ಲಿ ಸಿರಸಿ, ಸಿದ್ದಾಪುರ, ಅಂಕೋಲಾದ ಸತ್ಯಾಗ್ರಹವೂ ನಿಂತಿತು.

## ಮೈಸೂರು ಕಾಂಗ್ರೆಸ್ ಸ್ಥಾಪನೆ ಮತ್ತು ಶಿವಪುರ ಸತ್ಯಾಗ್ರಹ

ಗಾಂಧೀಜಿಯವರು ಮೈಸೂರಿನ ಜನತೆಗೆ ತಮ್ಮದೇ ಆದ ಒಂದು ಸ್ವತಂತ್ರ ಸಂಸ್ಥೆಯನ್ನು ರೂಪಿಸಿಕೊಳ್ಳಲು ಅನುಮತಿ ನೀಡಿದರು. ಅದರಂತೆ 'ಮೈಸೂರು ಕಾಂಗ್ರೆಸ್ ಸಂಸ್ಥೆ'ಯನ್ನು ಸ್ಥಾಪಿಸಲು ಸಂಸ್ಥಾನದ ಕಾಂಗ್ರೆಸ್ಸಿಗರು ನಿರ್ಣಯ ಕೈಗೊಂಡರು.

ಅಂದು ಮಹಾಶಿವರಾತ್ರಿ ೨೮–೦೨–೧೯೩೮ರಂದು ಅಡ್ವೊಕೇಟ್ ಲಕ್ಷ್ಮೀನಾರಾಯಣ ರಾಯರ ಮನೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಸಭೆ ಸೇರಿತು. ಟಿ. ಸಿದ್ದಲಿಂಗಯ್ಯನವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಆ ಮಹಾಸಭೆಯಲ್ಲಿ ಮೈಸೂರು ಸಂಸ್ಥಾನದ ಎಂಟು ಜಿಲ್ಲೆಗಳಿಂದಲೂ ಬಂದಿದ್ದ ಪ್ರತಿನಿಧಿಗಳು ಭಾಗವಹಿಸಿದ್ದರು. ಅಂದು 'ಮೈಸೂರು ಕಾಂಗ್ರೆಸ್' ಅಧಿಕೃತವಾಗಿ ಸ್ಥಾಪನೆಯಾಯಿತು.

'ಜವಾಬ್ದಾರಿ ಸರ್ಕಾರದ ಸ್ಥಾಪನೆಗೆ ಹೋರಾಟ ನಡೆಸುವುದು ಸಂಸ್ಥೆಯ ಮುಖ್ಯ ಗುರಿ' ಎಂದು ಘೋಷಿಸಲಾಯಿತು. ಕಾರ್ಯಕ್ರಮ ರೂಪಿಸಲು ಅಖಿಲ ಭಾರತ ಮಟ್ಟದ ಅಧಿವೇಶನವೊಂದನ್ನು ಕರೆಯಬೇಕೆಂದು ತೀರ್ಮಾನಿಸಲಾಯಿತು. ಅದರಂತೆ ಮುಂದೆ ಈ ವಿಷಯದ ಬಗ್ಗೆ ಚರ್ಚಿಸಲಿಕ್ಕೆಂದು ಮೈಸೂರಿನ ಸಾಹುಕಾರ್ ಚೆನ್ನಯ್ಯನವರ ಮನೆಯಲ್ಲಿ ಪ್ರಮುಖರೆಲ್ಲ ಸಭೆ ಸೇರಿದರು.

ಮೈಸೂರು, ಬೆಂಗಳೂರಿನ ನಡುವೆ ಇರುವ ಮದ್ದೂರಿನ ಹತ್ತಿರದ ಶಿವಪುರದಲ್ಲಿ ಅಧಿವೇಶನ ನಡೆಸಲು ತೀರ್ಮಾನಿಸಲಾಯಿತು. ಒಂದು ಸ್ವಾಗತ ಸಮಿತಿಯನ್ನು ರಚಿಸಿದರು. ಸಾಹುಕಾರ್ ಚೆನ್ನಯ್ಯನವರು ಅದರ ಅಧ್ಯಕ್ಷರು



ಮತ್ತು ತಿರುಮಲೆ ಗೌಡರು ಉಪಾಧ್ಯಕ್ಷರು, ಹೆಚ್. ಕೆ. ವೀರಣ್ಣಗೌಡರು ಮತ್ತು ಎ. ಜಿ. ಬಂದೀಗೌಡರು ಕಾರ್ಯದರ್ಶಿಗಳು.

ಈ ಅಧಿವೇಶನದ ಪ್ರಾಮುಖ್ಯತೆಯನ್ನು ಜನರಿಗೆ ತಿಳಿಸಿಕೊಡುವುದಕ್ಕಾಗಿ ಅನೇಕ ಪ್ರಕಟಣೆಗಳನ್ನು ಹೊರಡಿಸಿದರು. ತಿರುಮಲೆಗೌಡರ ವಿಶಾಲವಾದ ಮನೆಯಲ್ಲಿ ಅಧಿವೇಶನಕ್ಕೆ ಸಂಬಂಧಿಸಿದಂತೆ ವಿವಿಧ ಕಛೇರಿಗಳು ಆರಂಭವಾದುವು. ತಿರುಮಲೆಗೌಡರದೇ ಆದ ವಿಶಾಲ ಜಮೀನಿನಲ್ಲಿ ಅಧಿವೇಶನ ನಡೆಸಲು ನಿಶ್ಚಯಿಸಲಾಯಿತು. ಧ್ವಜ ವೇದಿಕೆ, ಪ್ರೇಕ್ಷಕಾಂಗಣ ಎಲ್ಲವೂ ಒಂದೊಂದಾಗಿ ಸಿದ್ಧವಾಗುತ್ತ ಬಂದವು. ಎಲ್ಲವನ್ನೂ ಗಮನಿಸಿದ ಸರ್ಕಾರ ನಿಧಾನವಾಗಿ ತನ್ನ ಕಿರುಕುಳ ಪ್ರಾರಂಭಿಸಿತು. ಅಧಿವೇಶನ ನಡೆಸದಂತೆ ಸರ್ಕಾರವು ಅನೇಕರಿಗೆ ಆಮಿಷಗಳನ್ನೊಡ್ಡಿತು. ಜನ ನಿರ್ಲಕ್ಷಿಸಿ ಮುಂದುವರೆದಾಗ ನಾನಾ ರೀತಿಯ ಕಿರುಕುಳಗಳಿಗೆ ಅವರನ್ನೊಳಪಡಿಸಿದರು.

ಅಡುಗೆ ಕೆಲಸಕ್ಕೆಂದು ದೊಡ್ಡ ದೊಡ್ಡ ಪಾತ್ರೆಗಳನ್ನು ಕೊಟ್ಟ ತರಕಾರಿ ಅನಂತ ರಾಮಯ್ಯ ಎಂಬುವರನ್ನು ಸರ್ಕಾರಿ ನೌಕರಿಯಿಂದ ವಜಾಮಾಡಿದರು. ಮದ್ದೂರಿನ ಸುತ್ತಮುತ್ತ ಪ್ರದೇಶದಲ್ಲೆಲ್ಲ ನಿಷೇದಾಜ್ಞೆ ಜಾರಿಗೆ ತಂದರು. ಆದರೂ ಯಾವ ಕಾರ್ಯಕರ್ತರುಗಳಾಗಲಿ, ದಾನಿಗಳಾಗಲಿ ಇದರಿಂದ ಎದೆಗುಂದಲಿಲ್ಲ. ಧೃತಿಗೆಡದೆ ತಮ್ಮ ಕೆಲಸ ಮುಂದುವರೆಸುತ್ತಿದ್ದರು.

ಎಂ. ಎನ್. ಜೋಯಿಸ್ ಮತ್ತು ಅವರ ಪತ್ನಿ ಸುಬ್ಬಮ್ಮ ಜೋಯಿಸ್, ಟಿ. ಸುನಂದಮ್ಮ, ವೀರಕೇಸರಿ ಸೀತಾರಾಮಶಾಸ್ತ್ರಿ, ಕೆ. ಟಿ. ಭಾಷ್ಯಂ, ಟಿ. ಸಿದ್ದಲಿಂಗಯ್ಯ ಮೊದಲಾದ ಹಿರಿಯ ಮುಖಂಡರುಗಳು ಸಂಸ್ಥಾನದ ಎಲ್ಲ ಕಡೆಯೂ ಮಿಂಚಿನ ವೇಗದಲ್ಲಿ ಸಂಚರಿಸುತ್ತ ಪ್ರಚಾರ ಕಾರ್ಯ ನಡೆಸಿದರು.

೧೧–೦೪–೧೯೩೮ರಂದು ಮಹಾಧಿವೇಶನ ಜರುಗತಕ್ಕದ್ದೆಂದು ನಿರ್ಣಯವಾಗಿತ್ತು. ಅದರಂತೆ ಎಲ್ಲ ಸಿದ್ಧತೆಗಳೂ ಬಿರುಸಾಗಿ ನಡೆಯುತ್ತಿದ್ದವು. ಸ್ವಯಂಸೇವಕ ದಳ, ಧ್ವಜ ವೇದಿಕೆ, ಊಟ–ತಿಂಡಿಗಳ ವ್ಯವಸ್ಥೆ, ಚಪ್ಪರದ ಕೆಲಸ–ಎಲ್ಲಕ್ಕೂ ಒಬ್ಬೊಬ್ಬರು ನಾಯಕರನ್ನು ನಿಯಮಿಸಲಾಗಿತ್ತು. ಎಂ. ಎನ್. ಜೋಯಿಸರು ಸ್ವಯಂಸೇವಕ ದಳದ ನಾಯಕರಾಗಿದ್ದರು. (GOC-General Officer Commanding).

ಶಿವಪುರ ಧ್ವಜ ಸತ್ಯಾಗ್ರಹದಲ್ಲಿ ಜೋಯಿಸರ ಪಾತ್ರ ರೋಮಾಂಚಕ, ಶಿವಪುರದಲ್ಲಿ ಧ್ವಜಾರೋಹಣ ಮಾಡಬಾರದೆಂಬ ಪ್ರತಿಬಂಧಕಾಜ್ಞೆ ಇತ್ತು. ಧ್ವಜಾರೋಹಣವೇ ಕಾಂಗ್ರೆಸ್ಸಿನ ಪ್ರಥಮ ಗುರಿ. ಸಾವಿರಾರು ಜನರು ಉತ್ಸಾಹಭರಿತವಾಗಿ ಧ್ವಜ ಮೈದಾನದಲ್ಲಿ ಕಿಕ್ಕಿರಿದಿದ್ದರು. ಟಿ. ಸಿದ್ದಲಿಂಗಯ್ಯನವರು ಧ್ವಜ ಹಾರಿಸುವ ಮೊದಲೇ ಬಂಧಿತರಾದರು. ಜಿ.ಓ.ಸಿ. ಆಗಿದ್ದ ಜೋಯಿಸರು ತಡಮಾಡದೆ ಧ್ವಜದ ದಾರ ಎಳೆದೇಬಿಟ್ಟರು. ತ್ರಿವರ್ಣ ಧ್ವಜ ಪುಷ್ಪವೃಷ್ಟಿ ಮಾಡುತ್ತಾ ಕಿವಿ ಗಡಚಿಕ್ಕುವ ಚಪ್ಪಾಳೆಯೊಡನೆ ನೀಲಗಗನದಲ್ಲಿ ಹಾರಾಡಿತು. ಕೂಡಲೇ ಜೋಯಿಸರ ಬಂಧನವೂ ಆಯಿತು. ಶಿವಪುರ ಸತ್ಯಾಗ್ರಹದ ಸಮಯದಲ್ಲಿ ಜೋಯಿಸರು ಸ್ವಯಂಸೇವಕ ದಳದ ಮುಖ್ಯಸ್ಥರಾಗಿ ಎಲ್ಲಾ ಸಿದ್ಧತೆಗಳನ್ನು ಅಚ್ಚುಕಟ್ಟಾಗಿ ನೆರವೇರಿಸಿದರು. ಮಂಡ್ಯ ಕೋರ್ಟಿನಲ್ಲಿ ಟ್ರಯಲ್ ಬಂದಿಯಾಗಿ ಮೂರು ತಿಂಗಳ ಕಾಲದ ಸೆರೆಮನೆವಾಸ ಅನುಭವಿಸಿದರು. ಪಟೇಲರ ಸಂಧಾನವಾದ ಮೇಲೆ ಎಲ್ಲ ರಾಜಕೀಯ ಬಂಧಿಗಳ ಬಿಡುಗಡೆಯಾಯಿತು.

ಶಿವಪುರದ ಇತಿಹಾಸ ಚಿರಸ್ಮರಣೀಯ. ಇದು ಮುಂದೆ ಸಾವಿರಾರು ಸತ್ಯಾಗ್ರಹಿಗಳಿಗೆ ಸ್ಫೂರ್ತಿನೀಡಿತು, ಮೈಸೂರು ಸಂಸ್ಥಾನದ ಇತಿಹಾಸವನ್ನೇ ಬದಲಾಯಿಸಿತು. ಇಲ್ಲಿನ ಜನಗಳ ಶಕ್ತಿಸಾಮರ್ಥ್ಯ, ದೇಶಪ್ರೇಮ, ದಕ್ಷತೆ ಇವುಗಳ ಪ್ರದರ್ಶನದಿಂದ ಇಡೀ ಮೈಸೂರಿಗೊಂದು ವಿಶಿಷ್ಟಸ್ಥಾನ ದೊರಕಿತೆಂದರೆ ತಪ್ಪಾಗಲಾರದು.

ಈ ಧ್ವಜ ಸತ್ಯಾಗ್ರಹದ ಸಂಗತಿ ತಿಳಿಸುತ್ತಿರುವಾಗ ಮೈಸೂರಿನಲ್ಲಿ ನಡೆದ ಮತ್ತೊಂದು ಅವಿಸ್ಮರಣೀಯ ಘಟನೆಯನ್ನು ಹೇಳಲೇಬೇಕು:

ರಾಷ್ಟ್ರೀಯ ಕಾಂಗ್ರೆಸ್ಸಿನ ಆಣತಿಯ ಮೇಲೆ ಭಾರತದ ಎಲ್ಲ ಕಡೆ ಪ್ರತಿ ವರ್ಷ ಜನವರಿ, ೨೬ನೆಯ ತಾರೀಖು ಧ್ವಜಾರೋಹಣ ನಡೆಯುತ್ತಿತ್ತು. ಮೈಸೂರು ನಗರ ಕಾಂಗ್ರೆಸ್ಸಿನವರೂ ಅದನ್ನು ತಪ್ಪದೆ ಆಚರಿಸುತ್ತಿದ್ದರು.

೨೬.೦೧.೧೯೩೮ರಂದು ಇಂತಹ ಕಾರ್ಯಕ್ರಮವಿದ್ದಿತು. ಆ ಸಮಯ ಜೋಯಿಸರು ಸೆರೆಮನೆಯಲ್ಲಿದ್ದುದರಿಂದ ಧ್ವಜ ಹಾರಿಸುವ ಸಲುವಾಗಿ ಬೇರೆ ಯಾರೂ ಮುಂದೆ ಬರುವ ಸುಳಿವು ಸೂಚನೆ ಕಾಣದೆ ಸುಬ್ಬಮ್ಮನವರಿಗೆ ಚಿಂತೆ ಆವರಿಸಿತು.



'ಕೇವಲ ಇನ್ನು ಮೂರು ದಿನ ಮಾತ್ರ ಉಳಿದಿದೆ. ಜನವರಿ ೨೬ರ ಧ್ವಜಾರೋಹಣ ಯಾವ ವರ್ಷವೂ ತಪ್ಪಿಸಿದ್ದಿಲ್ಲ. ನಾನು ಹೆಣ್ಣು ಹೆಂಗಸು ಏನು ಮಾಡಲಿ?' ಎಂದು ಪರಿತಪಿಸುತ್ತಿದ್ದಾಗ, ತಗಡೂರಿನ ಸೇವಾಶ್ರಮದಲ್ಲಿ ಕೆಲಸ ಮಾಡುತ್ತಿದ್ದ ರಂಗಪ್ಪ ಯಾವುದೋ ಕಾರಣಕ್ಕಾಗಿ ಸುಬ್ಬಮ್ಮನವರಲ್ಲಿಗೆ ಬಂದು, ಅವರ ಕೊರಗನ್ನಾಲಿಸಿ: "ತಾಯಿ, ಇಷ್ಟು ಮಾತ್ರ ನಾನು ಮಾಡಬಲ್ಲೆ. ಒಂದು ಅಡಕೆ ಮರವನ್ನು ತಂದು ಧ್ವಜಸ್ತಂಭ ನಿಲ್ಲಿಸಿಕೊಡುತ್ತೇನೆ. ಧ್ವಜವನ್ನೂ ಕಟ್ಟಿಕೊಡಬಹುದು. ಆದರೆ ಮುಂದಿನ ಕೆಲಸ" ಎಂದು ನಿಲ್ಲಿಸಿದಾಗ, ಸುಬ್ಬಮ್ಮನವರಿಗೆ ಕುಣಿದಾಡುವಂತಾಯಿತು.

"ರಂಗಪ್ಪ, ಇಷ್ಟು ಮಾತ್ರ ನೀನು ಮಾಡುವುದಾದರೆ ಜನ್ಮ ಪೂರ್ತಿ ನಿನ್ನನ್ನು ನೆನೆಸುತ್ತೇನೆ. ಸುಬ್ಬರಾಯನಕೆರೆ ಮೈದಾನದಲ್ಲಿ ಧ್ವಜಸ್ತಂಭವೊಂದನ್ನು ನೀನು ಮಾಡಿ ಕೊಡು. ಮುಂದಿನ ಹೊಣೆಗಾರಿಕೆ ನನಗಿರಲಿ" ಎಂದು ಹೇಳಿ ನಿಶ್ಚಿಂತರಾದರು.

ಆ ದಿನ ೧೪೪ನೆಯ ಸೆಕ್ಷನ್ ಪ್ರತಿಬಂಧಕಾಜ್ಞೆಯು ಜಾರಿಯಲ್ಲಿದ್ದು ಧ್ವಜಾರೋಹಣ ಮಾಡುವುದನ್ನು ತಡೆಯುವುದು ಪೊಲೀಸರಿಗೆ ಅನಿವಾರ್ಯವಾಗಿತ್ತು. ದೃಢಮನಸ್ಸಿನಿಂದ ಸಂಕಲ್ಪ ಮಾಡಿದ್ದ ಸುಬ್ಬಮ್ಮ ಈ ಯಾವ ವಿಷಯದಿಂದಲೂ ಎದೆಗುಂದದೆ ತಾವೇ ಧ್ವಜಾರೋಹಣ ಮಾಡುವುದಾಗಿ ಘೋಷಿಸಿದರು.

ಮೈಸೂರು ರಾಜ್ಯದಲ್ಲಿ ದೇಶದ ಸ್ವಾತಂತ್ರ್ಯಕ್ಕಾಗಿ ಸರ್ಕಾರೀ ಆಜ್ಞೆಗಳನ್ನು ಮುರಿದು ಯಾವ ಮಹಿಳೆಯೂ ಆವರೆವಿಗೆ ಜೈಲಿಗೆ ಹೋಗಿರಲಿಲ್ಲ. ಈ ದಿಸೆಯಲ್ಲಿ ಸುಬ್ಬಮ್ಮನವರೇ ಪ್ರಪ್ರಥಮ ಮಹಿಳೆ. ಈ ಸಂದರ್ಭವನ್ನು ವೀಕ್ಷಿಸಲು ಕುತೂಹಲಗೊಂಡ ಸಾವಿರಾರು ಜನ ಸ್ತ್ರೀಪುರುಷರು ಉತ್ಸಾಹದಿಂದ ಸುಬ್ಬರಾಯನಕೆರೆ ಮೈದಾನದಲ್ಲಿ ಕಿಕ್ಕಿರಿದು ನೆರೆದಿದ್ದರು. ಕಂಕುಳುಮಗು ಜಯಸಿಂಹನನ್ನು ಎತ್ತಿಕೊಂಡು ಸುಬ್ಬಮ್ಮ ಹಾಜರಾದರು. ನಿಗದಿಯಾದ ಸಮಯಕ್ಕೆ ಸರಿಯಾಗಿ ಕೈಮಗುವನ್ನು ಪಕ್ಕದಲ್ಲಿದ್ದ ಹೆಂಗಸಿನ ಕೈಗಿತ್ತು ಸುಬ್ಬಮ್ಮ ವೇದಿಕೆಯನ್ನೇರಿ ಸಾಂಗವಾಗಿ ಧ್ವಜಾರೋಹಣ ಮಾಡಿ ಬಿಟ್ಟರು. ಇದನ್ನೇ ಕಾಯುತ್ತಿದ್ದ ಪೊಲೀಸರು ಅವರನ್ನು ದಸ್ತಗಿರಿ ಮಾಡಿದರು. ದಿಟ್ಟ ಹೆಜ್ಜೆಗಳನ್ನಿಡುತ್ತ ಪುಟ್ಟಮಗು ಜಯಸಿಂಹನನ್ನೆತ್ತಿಕೊಂಡು ಸುಬ್ಬಮ್ಮ ಪೊಲೀಸಿನವರ ಹಿಂದೆ

ಹೊರಟಾಗ: "ನಾವು ಬಂಧಿಸಿರುವುದು ನಿಮ್ಮನ್ನು ಮಾತ್ರ ಮಗುವನ್ನಲ್ಲ. ಆದ್ದರಿಂದ ಮಗುವನ್ನು ಬಿಟ್ಟು ನೀವು ಮಾತ್ರ ನಮ್ಮೊಡನೆ ಬನ್ನಿ" ಎಂದರು, ಪೊಲೀಸಿನವರು. "ಇದೆಂತಹ ನ್ಯಾಯ? ಕೈಮಗುವನ್ನು ಬಿಟ್ಟು ನಾನು ಮಾತ್ರ ಹೇಗೆ ಬರಲಿ? ಬರುವುದಾದರೆ ಮಗುವಿನೊಡನೆಯೇ ನಾನು ಬರುವುದು" ಎಂದು ಸುಬ್ಬಮ್ಮ ಹಟ ಹಿಡಿದರು.

ಪೊಲೀಸಿನವರು ಮುಂದೇನೂ ಮಾಡಲಾಗದೆ ವಿಷಯವನ್ನು ಮ್ಯಾಜಿಸ್ಟ್ರೇಟರ್ ಮುಂದಿಟ್ಟರು. 'ಪುಟ್ಟಮಗು ತಾಯಿಯಿಂದ ಅಗಲಿರಲಾರದು. ಆದ್ದರಿಂದ ಮಗುವಿನ ಸಮೇತ ತಾಯಿಯನ್ನು ದಸ್ತಗಿರಿ ಮಾಡಿ ಕೊಂಡೊಯ್ಯುವುದು' ಎಂದು ನ್ಯಾಯಾಧೀಶರು ಆದೇಶವಿತ್ತರು.

ಅದರಂತೆ ಮಗು ಜಯಸಿಂಹನ ಸಮೇತ ಸುಬ್ಬಮ್ಮನವರು ಜೈಲುವಾಸ ಅನುಭವಿಸ ಬೇಕಾಗಿ ಬಂತು.

ನಮ್ಮ ರಾಜ್ಯದಲ್ಲಿ ದೇಶದ ಸ್ವಾತಂತ್ರ್ಯಕ್ಕಾಗಿ ಜೈಲುವಾಸ ಅನುಭವಿಸಿದ ಮೊಟ್ಟ ಮೊದಲ ಮಹಿಳೆಯೆಂದರೆ, ಸುಬ್ಬಮ್ಮ ಜೋಯಿಸ್!





**ಸುಬ್ಬಮ್ಮ ಜೋಯಿಸ್ ಮತ್ತು ಅವರ ಪುತ್ರ ಜಯಸಿಂಹ ಜೋಯಿಸ್‌ರವರ ಛಾಯಚಿತ್ರ**



## ಹ್ಯಾಮಿಲ್ಟನ್ ಸತ್ಯಾಗ್ರಹ:

ಸಂಸ್ಥಾನದ ಐ.ಜಿ.ಪಿ. ಹ್ಯಾಮಿಲ್ಟನ್ ಎಂಬ ಪೊಲೀಸ್ ಅಧಿಕಾರಿಯ ವಿವೇಚನಾ ರಹಿತ ನಡೆ ವಿದುರಾಶ್ವತ್ಥದ ಹತ್ಯಾಕಾಂಡಕ್ಕೆ ಕಾರಣವಾಯಿತು. ಮೈಸೂರು ಸರ್ಕಾರ ಮೈಸೂರಿನ ಸೆಂಟ್ರಲ್ ಪೊಲೀಸ್ ಠಾಣೆಗೆ ಹ್ಯಾಮಿಲ್ಟನ್ ಬಿಲ್ಡಿಂಗ್ ಎಂದು ಹೆಸರಿಡಬೇಕೆಂದು ತೀರ್ಮಾನಿಸಿತು. ಸರ್ಕಾರದ ತೀರ್ಮಾನವನ್ನು ಪ್ರತಿಭಟಿಸಿ ಸಾರ್ವಜನಿಕ ಸಭೆ ಮೆರವಣಿಗೆಗಳು ನಡೆದುವು. ಸರ್ಕಾರ ಅದಕ್ಕೆ ಗಮನವನ್ನೇ ಕೊಡಲಿಲ್ಲ. ಆಗ ತಗಡೂರು ರಾಮಚಂದ್ರರಾಯರು ಹಾಗೂ ಎಂ. ಎನ್. ಜೋಯಿಸ್ ಒಂದು ಚಳವಳಿ ಮಾಡಬೇಕೆಂದು ನಿರ್ಧರಿಸಿದರು. ಕಾಂಗ್ರೆಸ್ ಕಾರ್ಯಕರ್ತರು ಒಂದು ಬಿದುರು ಗಳು ತೆಗೆದುಕೊಂಡು ಅದಕ್ಕೊಂಡು ಈಚಲ ಪೊರಕೆ ಕಟ್ಟಿ ಅದನ್ನು ಕಪ್ಪು ಬಣ್ಣದಲ್ಲಿ ಅದ್ದಿ ಆ ಕಟ್ಟಡದಲ್ಲಿದ್ದ ಹ್ಯಾಮಿಲ್ಟನ್ ಹೆಸರಿಗೆ ಬಳಿದರು. ಪೊಲೀಸರು ನೂರಾರು ಜನರನ್ನು ಬಂಧಿಸಿದರು. ತಗಡೂರು ಹಾಗೂ ಜೋಯಿಸರನ್ನು ಒಂದು ವರ್ಷ ಕಾಲ ಜೈಲಿಗೆ ಕಳಿಸಿದರು.

## ೧೯೪೨ರ ಕ್ವಿಟ್ ಇಂಡಿಯಾ ಚಳುವಳಿ

ಕ್ವಿಟ್ ಇಂಡಿಯಾ ಚಳುವಳಿ ಮೈಸೂರು ಸಂಸ್ಥಾನದಲ್ಲೂ ತೀವ್ರ ಸ್ವರೂಪವನ್ನು ಪಡೆಯಿತು. ಮೈಸೂರಿನಲ್ಲಿ ಬಹುತೇಕ ನಾಯಕರ ಬಂಧನವಾಯಿತು. ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಮೈಸೂರು ನಗರದ ಯುವಕರು ಶ್ಲಾಘನೀಯ ಪಾತ್ರ ವಹಿಸಿದರು. ಕ್ವಿಟ್ ಇಂಡಿಯಾ ಚಳುವಳಿಯ ಸಂದರ್ಭದಲ್ಲಿ ಸುಬ್ಬರಾಯನಕೆರೆ ಐತಿಹಾಸಿಕ ಘಟನೆಗಳಿಗೆ ಸಾಕ್ಷಿಯಾಗಿದೆ. ಸುಬ್ಬರಾಯನ ಕೆರೆಯ ಮೈದಾನವು ಮಹಾರಾಜ ಕಾಲೇಜು, ಮಹಾರಾಣಿ ಕಾಲೇಜು, ಮರಿಮಲ್ಲಪ್ಪ ಹಾಗೂ ಹಾರ್ಡ್ವಿಕ್ ಶಾಲೆಗಳಿಗೆ ಕೇಂದ್ರದಲ್ಲಿತ್ತು. ಚಳುವಳಿಯ ಕರೆ ಬಂದ ಅರ್ಧ ಗಂಟೆಯೊಳಗೆ ನೂರಾರು ವಿದ್ಯಾರ್ಥಿಗಳು, ಯುವಕರು, ಮಹಿಳೆಯರು ಸೇರಿಬಿಡುತ್ತಿದ್ದರು. ಹಿರಿಯ ಮುಖಂಡರೆಲ್ಲ ಸೆರೆಮನೆಯಲ್ಲಿದ್ದುದರಿಂದ ಕ್ವಿಟ್ ಇಂಡಿಯಾ ಚಳುವಳಿ ಬಹುಮಟ್ಟಿಗೆ ವಿದ್ಯಾರ್ಥಿಗಳಿಂದಲೇ ಮುಂದುವರಿಯಬೇಕಾಗಿತ್ತು. ಚಳುವಳಿ ನಡೆಸಲು ಯಾವ 'ನೀಲಿನಕ್ಷೆ'ಯೂ ವಿದ್ಯಾರ್ಥಿಗಳ ಮುಂದಿರಲಿಲ್ಲ. ಕಲ್ಲಚ್ಚಿನ, ಕೈಬರಹದ ಗುಪ್ತ ಸಂದೇಶಗಳ ಹಾಳೆಗಳಿಗೆ ಲೆಕ್ಕವೆ ಇರಲಿಲ್ಲ. ಹೆಚ್. ವೈ. ಶಾರದಾ ಪ್ರಸಾದ್ ಆ

ದಿನಗಳನ್ನು ನೆನೆದು ಈ ರೀತಿ ಬರೆಯುತ್ತಾರೆ–"ಎಂ. ವಿ. ಕೃಷ್ಣಪ್ಪ, ಕೆ. ಎಸ್. ಅಬ್ದುಲ್ ಗಫಾರ್, ಭೂಪಾಲಂ ವಾಸುದೇವಮೂರ್ತಿ, ಎಂ. ಸಿ. ಚಂದ್ರಶೇಖರಯ್ಯ, ಹೆನ್ರಿ ದೇವದಾಸ್, ಎಂ. ವಿ. ಕೃಷ್ಣಸ್ವಾಮಿ, ಅರಕಲಗೂಡು ಸೀತಾರಾಮಯ್ಯ, ಖಾದ್ರಿ ಶಾಮಣ್ಣ ಮತ್ತು ನಾನು (ಅಂದರೆ ಶಾರದಾ ಪ್ರಸಾದ್) ಮಹಾರಾಜ ಕಾಲೇಜಿನ ಎದುರಿನ ಮೈದಾನ ಹಾಗೂ ಸುಬ್ಬರಾಯನ ಕೆರೆಯಲ್ಲಿ ಭಾಷಣ ಬಿಗಿಯುವುದಲ್ಲದೆ ತರಗತಿಗಳ ಬಹಿಷ್ಕಾರ, ಮೆರವಣಿಗೆ ಏರ್ಪಡಿಸಿದೆವು. ಗಾಂಭೀರ್ಯದಿಂದ ಅಹಿಂಸೆಯ ಕಟ್ಟಲೆಗೆ ಒಳಪಟ್ಟಂತೆ ನಡೆದುಕೊಂಡೆವು. ಸೆರೆಮನೆಗೆ ಹೋದೆವು" ಎಚ್. ವೈ. ಶಾರದಾ ಪ್ರಸಾದರು ವಿದ್ಯಾರ್ಥಿ ಸಂಘಟನೆಯಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸಿದ್ದರು. ಕ್ವಿಟ್ ಇಂಡಿಯಾ ಚಳುವಳಿಯ ಕಾಲದಲ್ಲಿ ಸುಬ್ಬರಾಯನಕೆರೆ ವಿದ್ಯಾರ್ಥಿ ಹೋರಾಟದ ಕೇಂದ್ರವಾಯಿತು.

## ಜವಾಬ್ದಾರಿ ಸರ್ಕಾರದ ಸ್ಥಾಪನೆಗಾಗಿ ಮೈಸೂರು ಚಲೋ ಚಳುವಳಿ– ೧೯೪೭

ಭಾರತಕ್ಕೆ ಸ್ವಾತಂತ್ರ್ಯ ನೀಡುವ ನಿರ್ಧಾರವನ್ನು ಬ್ರಿಟಿಷ್ ಸರ್ಕಾರ ಕೈಗೊಂಡ ಮೇಲೂ ದೇಶೀಯ ಸಂಸ್ಥಾನಗಳ ಭವಿಷ್ಯ ಡೋಲಾಯಮಾನ ಸ್ಥಿತಿಯಲ್ಲೇ ಇದ್ದಿತು. ಭಾರತದ ಒಕ್ಕೂಟಕ್ಕೆ ಸೇರುವ ಅಥವಾ ಬಿಡುವ ಹಕ್ಕನ್ನು ದೇಶೀಯ ಸಂಸ್ಥಾನಗಳ ರಾಜಮಹಾರಾಜರುಗಳಿಗೇ ಬಿಡಲಾಗಿದ್ದಿತು. ಮೈಸೂರು ಸಂಸ್ಥಾನವನ್ನು ಭಾರತದ ಒಕ್ಕೂಟಕ್ಕೆ ಸೇರ್ಪಡೆ ಮಾಡುವ ಕರಾರಿಗೆ ಮಹಾರಾಜರು ಸಹಿ ಹಾಕಿದ್ದರು. ಆದರೆ ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪಿಸಲು ಮಹಾರಾಜರು ಮತ್ತು ಅವರ ಆಡಳಿತ ವರ್ಗದವರು ಸಿದ್ಧವಿರಲಿಲ್ಲ. ಆ ಸಂದರ್ಭದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಗೆ ಚಳುವಳಿಯನ್ನು ತೀವ್ರಗೊಳಿಸಬೇಕಾಯಿತು. ಎಂ. ಎನ್. ಜೋಯಿಸ್‌ರವರು ಯುವಕರನ್ನು ಸಂಘಟಿಸಿ ಸ್ವಾತಂತ್ರ್ಯೋದಯದ ಸಂದರ್ಭದಲ್ಲೇ ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆಯಾಗಬೇಕೆಂಬ ಸಂಕಲ್ಪ ಪ್ರಗತಿ ಪಕ್ಷದ್ದಾಗಿತ್ತು.

೧೯೪೭ ಆಗಸ್ಟ್ ಒಂದರ ಸುಮಾರಿಗೆ ಮೈಸೂರು ನಗರದ ಟೌನ್‌ಹಾಲ್‌ನಲ್ಲಿ ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯ ವಿಶೇಷ ಅಧಿವೇಶನ ನಡೆಯಿತು. ಕೆ. ಚೆಂಗಲರಾಯರೆಡ್ಡಿ ಆಗ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾಗಿದ್ದರು. ವೇದಿಕೆಯ ಮೇಲೆ ಟಿ. ಸುಬ್ರಹ್ಮಣ್ಯಂ, ಕೆ. ಟಿ. ಭಾಷ್ಯಂ, ಎಸ್. ಚನ್ನಯ್ಯ ಮತ್ತಿತರ ಕಾರ್ಯಕಾರಿ ಸಮಿತಿ ಸದಸ್ಯರು ಮಂಡಿಸಿದ್ದರು. ಟೌನ್‌ಹಾಲ್ ತುಂಬ ಕಾಂಗ್ರೆಸ್ ಸದಸ್ಯರು ಹಾಗೂ ಕಾರ್ಯಕರ್ತರು ಕಿಕ್ಕಿರಿದು ತುಂಬಿದ್ದರು. ಜವಾಬ್ದಾರಿ ಸರ್ಕಾರಕ್ಕಾಗಿ ಹೋರಾಟದ ಘೋಷಣೆಗೆ ಒತ್ತಾಯದ ಮೇಲೆ ಒತ್ತಾಯ. ಎಂ. ಎನ್. ಜೋಯಿಸ್ ಅವರು ವೇದಿಕೆ ಹತ್ತಿ ಮೈಕ್ ಮುಂದೆ ನಿಂತರು. ಆಗಸ್ಟ್ ೯ ರಿಂದ ಹೋರಾಟ ಆರಂಭಿಸಿ, ಜವಾಬ್ದಾರಿ ಸರ್ಕಾರದ ಗುರಿಸಾಧನೆಗೆ ಸ್ವಲ್ಪವೂ ಸಾವಕಾಶವಾಗಬಾರದು, ಹೋರಾಟಕ್ಕೆ ದಿನ ಗೊತ್ತುಮಾಡಿ ಎಂದು ಹಟ ಹಿಡಿದರು. ನಾಯಕವರ್ಗ ಹೋರಾಟದ ಸಂಕಲ್ಪ ಮಾಡಿದ್ದರೂ ಯಾವ ದಿನ ಹೋರಾಟವನ್ನು ಆರಂಭಿಸಬೇಕೆಂಬ ಬಗ್ಗೆ ಜಿಜ್ಞಾಸೆಯಲ್ಲಿದ್ದರು. "ನಮ್ಮ ಕೈಕಟ್ಟಿ ಹಾಕಬೇಡಿ. ನಾವು ಸೂಕ್ತ ದಿನ ಗೊತ್ತು ಮಾಡಿ ಹೋರಾಟ ಆರಂಭಿಸುತ್ತೇವೆ" ಎಂದು ವರಿಷ್ಠರ ಪರವಾಗಿ ಟಿ. ಸುಬ್ರಹ್ಮಣ್ಯಂ ಸಹ ಹಟದ ನಿಲುವನ್ನು ತಾಳಿದರು. ಜೋಯಿಸರು ಪಟ್ಟು ಬಿಡಲಿಲ್ಲ.

"ನೀವು ನಾಯಕರುಗಳು ನಿರ್ಧಾರ ಕೈಗೊಳ್ಳಲು ಮೀನಾಮೇಷಾ ಎಣಿಸುತ್ತಿದ್ದೀರಿ. ಪ್ರಾಯಶಃ ಆಗಸ್ಟ್ ೧೫ ರಂದು ದೆಹಲಿಯ ಸಂಭ್ರಮದ ಉತ್ಸವದಲ್ಲಿ ಭಾಗವಹಿಸಬೇಕೆಂಬ ಚಪಲ ನಿಮಗೆ ಇರಬಹುದು. ಹೋಗಿಬನ್ನಿ" ಎಂಬ ಧಾಟಿಯಲ್ಲಿ ಜೋಯಿಸರು ನಿಷ್ಠೂರವಾಗಿ ಮಾತನಾಡಿದರು. ಇದರಿಂದ ಕೆ. ಸಿ. ರೆಡ್ಡಿಯವರಿಗೆ ಚುಚ್ಚಿದಂತಾಯಿತು. "ನಮಗೆ ಅಂತಹ ಚಪಲವಿಲ್ಲ. ಹೋರಾಟಕ್ಕೆ ಸಿದ್ಧತೆಮಾಡಿಕೊಳ್ಳುತ್ತಿದ್ದೇವೆ. ನಿಮ್ಮ ಅಪೇಕ್ಷೆಯಂತೆ ಬೇಗಲೇ ಹೋರಾಟ ನಡೆಯುತ್ತದೆ" ಎಂದು ಹೇಳಿ ತಕ್ಷಣ ತಾವು ಹೋರಾಟಕ್ಕೆ ಬದ್ಧರೆಂದವರು ಪ್ರಕಟಿಸಿದರು. ನಂತರ ೧೯೪೭ರ ಸೆಪ್ಟೆಂಬರ್ ಒಂದರಿಂದಲೇ 'ಮೈಸೂರು ಚಲೋ' ಹೋರಾಟದ ಘೋಷಣೆಯಾಯಿತು. ಕೆ. ಸಿ. ರೆಡ್ಡಿಯವರು ಹೋರಾಟದ ಪ್ರಥಮ 'ಸರ್ವಾಧಿಕಾರಿ' ಎಂದು ಜಾಹಿರಾಯಿತು. ಬೆಂಗಳೂರಿನಿಂದ ಮೈಸೂರಿಗೆ ಕಾಂಗ್ರೆಸ್ ನಾಯಕರುಗಳು ಕೆ. ಸಿ. ರೆಡ್ಡಿಯವರ ನೇತೃತ್ವದಲ್ಲಿ ಪಾದಯಾತ್ರೆಯಲ್ಲಿ ಬಂದು ಅರಮನೆಯ ಮುಂದೆ ಸತ್ಯಾಗ್ರಹ ಮಾಡತಕ್ಕದ್ದೆಂಬ ಹೋರಾಟದ ಪ್ರಕ್ರಿಯೆಯೂ ಸ್ಪಷ್ಟವಾಯಿತು. ಪಾದಯಾತ್ರೆ ಆರಂಭವಾಗುವುದಕ್ಕೆ ಮುಂಚೆಯೇ ಸರ್ಕಾರವು ಕಾಂಗ್ರೆಸ್ ನಾಯಕರುಗಳನ್ನೂ ಕಾರ್ಯಕರ್ತರನ್ನೂ ಇತರ ಸತ್ಯಾಗ್ರಹಿಗಳನ್ನೂ ಬಂಧಿಸಿತು. ಜೋಯಿಸರು

ಭೂಗತರಾಗಿ ಹಿಂದೂಪುರಕ್ಕೆ ಹೋಗಿ ಅಲ್ಲಿಂದ 'ಮೈಸೂರು ಚಲೋ' ಚಳುವಳಿಗೆ ಮಾರ್ಗದರ್ಶನ ನೀಡಿದರು. ಅಲ್ಲಿಂದಲೇ 'ಪೌರವಾಣಿ' ಪತ್ರಿಕೆ ಮತ್ತು ಭಿತ್ತಿಪತ್ರಗಳನ್ನು ಪ್ರಕಟಿಸಿ ಮೈಸೂರು ಸಂಸ್ಥಾನಕ್ಕೆ ರವಾನೆ ಮಾಡುತ್ತಿದ್ದರು.

'ಮೈಸೂರು ಚಲೋ' ಚಳವಳಿಯಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳೂ ಯುವಕರೂ ಧುಮುಕಿ ಸೆರೆಮನೆಗಳನ್ನು ತುಂಬಿದರು. ಅದೇ ಸಮಯಕ್ಕೆ ಆಗಿನ ಮೈಸೂರು ಸಂಸ್ಥಾನದ ರೈಲ್ವೆ ನೌಕರರು ಅನಿರ್ದಿಷ್ಟ ಕಾಲದ ಸಾರ್ವತ್ರಿಕ ಮುಷ್ಕರ ಹೂಡಿದರು. ಮಹಾರಾಜರ ಆಡಳಿತ ಕುಸಿದುಬಿದ್ದಿತು. ಜವಾಬ್ದಾರಿ ಸರ್ಕಾರದ ಹೋರಾಟಕ್ಕೆ ದಿಗ್ವಿಜಯ ದೊರಕಿತು. ಕೆ. ಸಿ. ರೆಡ್ಡಿಯವರ ಮುಖ್ಯಮಂತ್ರಿತ್ವದಲ್ಲಿ ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆಯಾಯಿತು.

ಆ ಸಂದರ್ಭದಲ್ಲಿ ಸರ್ವಶ್ರೀ ಟಿ. ಸಿದ್ದಲಿಂಗಯ್ಯ, ಕೆ. ಟಿ. ಭಾಷ್ಯಂ, ಎಚ್. ಸಿ. ದಾಸಪ್ಪ, ಯಶೋಧರಾ ದಾಸಪ್ಪ, ಟಿ. ಸುನಂದಮ್ಮ, ಎಂ. ಎನ್. ಜೋಯಿಸ್, ಸುಬ್ಬಮ್ಮ ಜೋಯಿಸ್, ಅಗರಂ ರಂಗಯ್ಯ, ತಗಡೂರು ರಾಮಚಂದ್ರರಾವ್, ವಿ. ಎಸ್. ನಾರಾಯಣರಾವ್, ವೀರಣ್ಣಗೌಡ ದಂಪತಿಗಳು, ಸಾಹುಕಾರ್ ಚನ್ನಯ್ಯ, ಟಿ. ಮರಿಯಪ್ಪ, ಎಚ್. ಸಿದ್ದಯ್ಯ, ಎಸ್. ನಿಜಲಿಂಗಪ್ಪ, ಕೆ. ಸಿ. ರೆಡ್ಡಿ, ಕೆ. ಹನುಮಂತಯ್ಯ ಮುಂತಾದ ಧುರೀಣರು ಜವಾಬ್ದಾರಿ ಸರ್ಕಾರದ ಸ್ಥಾಪನೆಗೆ ಸತತ ಹೋರಾಟ ನಡೆಸಿದರು. ಜನರ ಸಂಘಟನೆ ಮಾಡಿದರು. ಅನುಕೂಲಕರವಾದ ಜನಮಾನಸವನ್ನು ನಿರ್ಮಾಣಮಾಡಿದರು.

## ಜವಾಬ್ದಾರಿ ಸರ್ಕಾರದ ಸ್ಥಾಪನೆ: ಸುಬ್ಬರಾಯನ ಕೆರೆಯಲ್ಲಿ ಕೆ. ಸಿ. ರೆಡ್ಡಿಯವರ ಭಾಷಣ

ಸುಬ್ಬರಾಯನ ಕೆರೆಯಲ್ಲಿ ಏರ್ಪಡಿಸಿದ್ದ ಸಾರ್ವಜನಿಕ ಸಭೆಗೆ ಅಧ್ಯಕ್ಷರು ತಮ್ಮ ಅನುಯಾಯಿಗಳೊಡನೆ ತೆರಳಿದರು. ಕೆರೆಯ ಅಂಗಳವೆಲ್ಲಾ ಭರ್ತಿಯಾಗಿ ಸುಮಾರು ೩೦ ಸಾವಿರ ಪ್ರೇಕ್ಷಕರು ಅಧ್ಯಕ್ಷರ ವಿಷಯವನ್ನು ಕೇಳಲು ನೆರೆದಿದ್ದರು. ಲೌಡ್ ಸ್ಪೀಕರ್ ವ್ಯವಸ್ಥೆಯನ್ನು ಮಾಡಲಾಗಿದ್ದಿತು. ಅಧ್ಯಕ್ಷರು ಸಭೆಗೆ ಆಗಮಿಸುತ್ತ ಪ್ರಥಮತಃ ಸಭಿಕರು ಅವರನ್ನು ಜಯ ಘೋಷದೊಡನೆ ಸ್ವಾಗತಿಸಿದರು. ಸಭಾಧ್ಯಕ್ಷ ಸ್ಥಾನವನ್ನು ಮೈಸೂರು ನಗರ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್. ಚೆನ್ನಯ್ಯ ವಹಿಸಿದ್ದರು.



ಶ್ರೀ ಚನ್ನಯ್ಯನವರು ಶ್ರೀ ಚಂಗಲರಾಯ ರೆಡ್ಡಿಯವರಿಗೆ ಹಾರವನ್ನರ್ಪಿಸಿ, ಅವರು ಭಾಷಣ ಮಾಡಬೇಕೆಂದು ಪ್ರಾರ್ಥಿಸಿದರು ಅನಂತರ ಅಧ್ಯಕ್ಷರು ವೇದಿಕೆಯ ಮೇಲೆ ಎದ್ದು ನಿಂತರು. ಮೈಸೂರು ವಿದ್ಯಾರ್ಥಿ ಕಾಂಗ್ರೆಸ್, ಮಹಿಳಾ ಸಂಘ ಮೊದಲಾದ ಅನೇಕ ಸಾರ್ವಜನಿಕ ಸಂಸ್ಥೆಗಳ ಪರವಾಗಿ ಅಧ್ಯಕ್ಷರಿಗೆ ಹಾರವನ್ನರ್ಪಿಸಿ ಗೌರವಿಸಲಾಯಿತು.

**ಅಧ್ಯಕ್ಷರ ಭಾಷಣ:** ಅನಂತರ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಚಂಗಲರಾಯ ರೆಡ್ಡಿಯವರು ಭಾಷಣ ಮಾಡುತ್ತಾ ಹೀಗೆ ತಿಳಿಸಿದರು.

ಮೈಸೂರು ಕಾಂಗ್ರೆಸ್ಸು ಜವಾಬ್ದಾರೀ ಸರ್ಕಾರ ಸ್ಥಾಪನೆಗಾಗಿ ಅನೇಕ ದಿವಸಗಳಿಂದಲೂ ಹೋರಾಟ ನಡೆಸಿ, ಕೊನೆಗೆ ಅನಿವಾರ್ಯವಾಗಿ. ಈ ಸತ್ಯಾಗ್ರಹ ಸಮರವನ್ನು ಹೂಡಿತು. ಈಗ್ಗೆ ಸುಮಾರು ಒಂದು ತಿಂಗಳ ಹಿಂದೆ ಘೋಷಿಸಲಾದ "ಚಲೋ ಮೈಸೂರ್" ಚಳುವಳಿಯು ಇಂದು ಯಶಸ್ವಿಯಾಗಿ ನಡೆದು ಮೈಸೂರಿನ ೭೭ ಲಕ್ಷ ಪ್ರಜೆಗಳ ಆಶೋತ್ತರವೂ ಕೈಗೂಡಿದೆ ಇದರಲ್ಲಿ ಸಹಕರಿಸಿದ ಸಂಸ್ಥಾನದ ಒಳಗಿನ ಮತ್ತು ಹೊರಗಿನ ಪ್ರಜಾ ವರ್ಗದವರೆಲ್ಲರಿಗೂ ನನ್ನ ಕೃತಜ್ಞತೆಗಳು ಈ ಸಂದರ್ಭದಲ್ಲಿ ಪೋಲೀಸರ ಅತ್ಯಾಚಾರಗಳಿಗೆ ಗುರಿಯಾಗಿ ಕಷ್ಟನಷ್ಟಗಳನ್ನು ಹೊಂದಿದವರಿಗೂ, ಮತ್ತು ಹುತಾತ್ಮರಿಗೂ ನನ್ನ ಅನುತಾಪವನ್ನು ವ್ಯಕ್ತಪಡಿಸುತ್ತೇನೆ. ಅಲ್ಲದೆ ಹುತಾತ್ಮರ ನೆನಪಿಗಾಗಿ ಒಂದು ಶಾಶ್ವತವಾದ ಸ್ಮಾರಕವನ್ನು ಸಹ ಏರ್ಪಡಿಸಲಾಗುವುದು.

ಮುಂದುವರಿದು, "ಶ್ರೀಮನ್ಮಹಾರಾಜರೊಡನೆ ಈ ದಿನ ನಡೆದ ಭೇಟಿಯ ಬಹಳ ಸೌಹಾರ್ದಯುತವಾಗಿಯೂ ಮತ್ತು ಪ್ರೇಮಯುತವಾಗಿಯೂ ಇದ್ದಿತು. ಪ್ರಭುಗಳವರು ತಮ್ಮ ಪ್ರಜೆಗಳ ವಿಚಾರದಲ್ಲಿ ಇಂದಿಗೂ ನಿಷ್ಕಳಂಕವಾದ ಪ್ರೇಮವನ್ನಿಟ್ಟಿದ್ದಾರೆ. ಅವರ ವಿಚಾರದಲ್ಲಿ ಇದುವರೆಗೆ ನಮಗಿದ್ದ ಅಭಿಪ್ರಾಯಗಳನ್ನು ಮಾರ್ಪಡಿಸಬೇಕಾಗಿದೆ–ಎಂದು ನುಡಿದು, ಮೈಸೂರು ಚಲೋ ಘೋಷಣೆಯನ್ನು ಈಗ ೪೦ ದಿನಗಳ ಹಿಂದೆ ಮಾಡಿ ಕಳೆದ ತಿಂಗಳ ನಾಲ್ಕನೇ ತಾರೀಖಿನ ದಿನ ನಾವು ಕಾಲ್ನಡಿಗೆಯಲ್ಲಿ ಅರಮನೆಗೆ ಹೋಗಿ ಮಹಾರಾಜರ ಮುಂದೆ ನಮ್ಮ ಬೇಡಿಕೆಗಳನ್ನಿಡಬೇಕೆಂದು ತೀರ್ಮಾನಿಸಿದ್ದೆವು ನಮ್ಮ ಕೂಗು ಅವರ ಕಿವಿಗೆ ಮುಟ್ಟಿಲ್ಲವೆಂಬ ಶಂಕೆಯೇ ಈ ಘೋಷಣೆಗೆ ಮುಖ್ಯ ಕಾರಣವಾಗಿತ್ತು. ನಗರದ ಮಹಾಜನರು ನಮಗೆ ನೀಡಿದ ಸ್ವಾಗತ

ಅಭೂತ ಪೂರ್ವಕವಾದುದು. ಇದು ಸಂಸ್ಥಾನದ ಪ್ರಜೆಗಳು ಕಾಂಗ್ರೆಸ್ ಸಂಸ್ಥೆಯಲ್ಲಿ ಇಟ್ಟಿರುವ ಅಚಲವಾದ ಪ್ರೀತಿ ವಿಶ್ವಾಸ ಮತ್ತು ನಂಬಿಕೆಗಳನ್ನು ವ್ಯಕ್ತಪಡಿಸುತ್ತದೆ.

ಮೈಸೂರು ಕಾಂಗ್ರೆಸ್ಸು ಈಗ ೧೦ ವರ್ಷಗಳ ಹಿಂದೆ ಪ್ರಜಾ ಸತ್ತಾತ್ಮಕವಾದ ಸರ್ಕಾರದ ಸ್ಥಾಪನೆಯ ಹೋರಾಟಕ್ಕಾಗಿ ಮೈಸೂರು ನಗರದಲ್ಲಿ ಸ್ಥಾಪಿತವಾಯಿತು. ಸತ್ಯಾಗ್ರಹ ಸಮರದ ಗುರಿಯೂ ರಾಜಧಾನಿಯಾದ ಮೈಸೂರಿಗೇ ಇತ್ತು; ಇಂದು ಸಂಸ್ಥಾನದ ೭೭ ಲಕ್ಷ ಪ್ರಜೆಗಳ ಧ್ಯೇಯವಾದ ಸಂಪೂರ್ಣ ಜವಾಬ್ದಾರೀ ಸರ್ಕಾರವು ಶ್ರೀಮನ್ಮಹಾರಾಜರವರಿಂದ ಅಂಗೀಕೃತವಾಗಿದೆಯೆಂದು ಮೊಟ್ಟ ಮೊದಲು ಮೈಸೂರಿನ ನಾಗರಿಕರ ಮುಂದೆ ಸಾರುವ ಸುಯೋಗ ಬಂದಿರುವುದು ಅತ್ಯಂತ ಮಹತ್ವದ ಸಂಗತಿ ಇಂದಿನ ದಿನ ಮೈಸೂರಿನ ಇತಿಹಾಸದಲ್ಲಿ ಚರಿತ್ರಾರ್ಹವಾದ ಸುವರ್ಣಾಕ್ಷರಗಳಲ್ಲಿ ಕೆತ್ತ ಬೇಕಾದ ಪವಿತ್ರ ದಿನ. ಇಂದಿನಿಂದ ಸಂಸ್ಥಾನದಲ್ಲಿ ಹೊಸ ಯುಗವು ಆರಂಭವಾಗಿದೆ–ಎಂಬುದಾಗಿ ಮಹಾ ಪ್ರಭುಗಳವರು ಸಾರಿದ್ದಾರೆ. ಇದುವರೆಗೆ ಕಾಂಗ್ರೆಸ್ಸು ಹೋರಾಟದಲ್ಲಿ ಮಗ್ನವಾಗಿತ್ತು ಉಳಿದ ಸಮಸ್ಯೆಗಳು ಅರಿವಿಗೇ ಬಂದಿರಲಿಲ್ಲ. ಈಗ ಕಾಂಗ್ರೆಸ್ಸಿನ ಅರ್ಥಾತ್ ಪ್ರಜೆಗಳ ಜವಾಬ್ದಾರಿ ಗುರುತರವಾಗಿದೆ; ಇನ್ನು ಮುಂದೆ ನಾವೆಲ್ಲರೂ ರಚನಾತ್ಮಕ ಕಾರ್ಯಗಳಲ್ಲಿ ತೊಡಗಬೇಕಾಗಿದೆ. ಎಂದಿನವರೆಗೆ ಬಡವರಿಗೆ ತಿನ್ನಲು ಆಹಾರನ್ನೂ, ಉಡಲು ಬಟ್ಟೆಯನ್ನೂ ದೊರಕಿಸಿಕೊಳ್ಳುವ ಶಕ್ತಿಯು ಉಂಟಾಗುವುದಿಲ್ಲವೋ, ಅಂದಿನವರೆಗೆ ನಮ್ಮ ರಚನಾತ್ಮಕ ಕಾರ್ಯ ಅವಿಚ್ಛಿನವಾಗಿ ನಡೆಯಬೇಕು.

ಸೆಪ್ಟೆಂಬರ್ ೧ ನೇ ತಾರೀಖು ಮೈಸೂರು ಚಲೋ ಘೋಷಣೆಯನ್ನು ಸಾರಿದ ನಂತರ ನಮ್ಮನ್ನು ೩ನೇ ತಾರೀಖು ಮಧ್ಯ ರಾತ್ರಿಯಲ್ಲಿ ದಸ್ತಗಿರಿ ಮಾಡಲಾಯಿತು. ಈಗ ನಮಗೆ ಜಯ ಲಭಿಸಿದೆ. ಕಾಂಗ್ರೆಸ್ಸಿನ ಸ್ಥಾಪನೆಯಾದಾಗ ಮಹಿಳೆಯರ ಪಾತ್ರ ವಿಶೇಷವಾಗಿತ್ತು. ಆದರೆ ಇತ್ತೀಚೆಗೆ ಅವರು ಇದರಲ್ಲಿ ವಿಶೇಷವಾಗಿ ಭಾಗವಹಿಸುತ್ತಿರಲಿಲ್ಲ. ಈ ದಿನ ಮತ್ತೆ ಹಿಂದಿಗಿಂತಲೂ ಅವರು ಅಗಣಿತವಾಗಿ ಇಲ್ಲಿ ನೆರೆದಿರುವುದು ಅವರ ಉತ್ಸಾಹ, ಧೈರ್ಯಗಳನ್ನೂ ಗಂಡಸರಿಗಿಂತ ಹೋರಾಟದಲ್ಲಿ ತಾವು ಹಿಂದಿಲ್ಲವೆಂಬ ಅವರ ದಿಟ್ಟತನವನ್ನೂ ವ್ಯಕ್ತಗೊಳಿಸುತ್ತದೆ.



ಜವಾಬ್ದಾರಿ ಸರ್ಕಾರದ ಸ್ಥಾಪನೆ: ಸುಬ್ಬರಾಯನ ಕೆರೆಯಲ್ಲಿ ಕೆ. ಸಿ. ರೆಡ್ಡಿಯವರ ಭಾಷಣ (ಸಾಧ್ವಿ ಪತ್ರಿಕೆಯ ವರದಿ)೧೩.೧೦.೧೯೪೭.

## ಸುಬ್ಬರಾಯನ ಕರೆಯಲ್ಲಿ ಭಾಷಣ ಮಾಡಿದ ಮಹನೀಯರು

ಮಹತ್ವಪೂರ್ಣ ಸ್ವಾತಂತ್ರ್ಯ ಹೋರಾಟದ ಸಂಘರ್ಷಗಳಿಗೆ ಸಾಕ್ಷಿಯಾದ ಸುಬ್ಬರಾಯನ ಕೆರೆಯಲ್ಲಿ ಅನೇಕ ಮಹನೀಯರು ಸ್ಫೂರ್ತಿದಾಯಕ ಭಾಷಣಗಳನ್ನು ಮಾಡಿ ಯುವಕರನ್ನು, ವಿದ್ಯಾರ್ಥಿಗಳನ್ನು, ಜನ ಸಾಮಾನ್ಯರನ್ನು ಹುರಿದುಂಬಿಸಿದ್ದಾರೆ. ಆಗಿನ ಮೈಸೂರಿನಲ್ಲಿ ಇಂದಿನ ಆಧುನಿಕ ಯುಗದ ಕಿವಿಡುಗಟ್ಟುವ ಗದ್ದಲವಿರಲಿಲ್ಲ. ಶಾಂತವಾಗಿತ್ತು. ಕಂಚಿನ ಕಂಠದಿಂದ ಸಿಂಹ ಘರ್ಜನೆ ಮಾಡುತ್ತಾ ಎಂ. ಎನ್. ಜೋಯಿಸ್ ಭಾಷಣ ಮಾಡಿದರೆಂದರೆ ಧ್ವನಿವರ್ಧಕವೇ ಬೇಡ. ಪುರಭವನದವರೆಗೆ ತಲುಪುತ್ತಿತ್ತಂತೆ ಅವರ ಧ್ವನಿ! ಅಂತೆಯೇ ಜಿ. ಸ್ವಾಮಿದಾಸ್ ಅವರು ಅದ್ಭುತ ಭಾಷಣಗಾರರು. ಅಗರಂ ರಂಗಯ್ಯ, ತಗಡೂರು ರಾಮಚಂದ್ರರಾವ್, ವೈ. ಜಿ. ಕೃಷ್ಣಮೂರ್ತಿ, ಹೆಚ್. ವೈ. ಶಾರದಾಪ್ರಸಾದ್, ಭೂಪಾಲಂ ಚಂದ್ರಶೇಖರ್, ಭೂಪಾಲಂ ಮಹದೇವಯ್ಯ, ಕೆ. ಸಿ. ರೆಡ್ಡಿ, ಬಿ. ಆರ್. ಪ್ರಾಣೇಶ್‌ರಾವ್ ಮುಂತಾದ ಮಹಾನ್ ನಾಯಕರು ಮೆಟ್ಟಿನಿಂತ ಪುಣ್ಯ ಭೂಮಿ ಇದಾಗಿದೆ. ಅಂತೆಯೇ ಅನೇಕ ಮಹಿಳಾ ನಾಯಕಿಯರನ್ನು ಮುಂಚೂಣಿಗೆ ತಂದಿತು. ಉದಾಹರಣೆ:– ಸುಬ್ಬಮ್ಮ ಜೋಯಿಸ್, ಯಶೋಧರಾ ದಾಸಪ್ಪ, ಟಿ. ಸುನಂದಮ್ಮ ಮುಂತಾದವರು. ಸುಬ್ಬರಾಯನ ಕೆರೆಯ ಅರಳಿಕಟ್ಟೆಯಡಿ ನಡೆಯುತ್ತಿದ್ದ ಬೌದ್ಧಿಕ ಚರ್ಚೆಗಳು ಬ್ರಿಟಿಷರ ವಸಾಹತು ನೀತಿಯ ಕರಾಳತೆಯನ್ನು ಬಿಚ್ಚಿಡುತ್ತಿತ್ತು. ಹಾಗೆಯೇ ವಿಶ್ವದ ಮಹಾನ್ ರಾಜಕೀಯ ಚಿಂತಕರ ವಿಚಾರಧಾರೆಯ ಬಗ್ಗೆಯೂ ವಿಚಾರ ವಿನಿಮಯ ನಡೆಯುತ್ತಿತ್ತು. ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವದ ಘೋಷಗಳು ಮೊಳಗುತ್ತಿದ್ದವು. ಅಂದಿನ ಯುಗದ ಹೋರಾಟಗಳ, ವಿಚಾರಗಳ, ದೇಶಪ್ರೇಮದ ಸಾಕ್ಷಿ ಎಂಬಂತೆ ಇಂದಿಗೂ ಆ ಅರಳೀಮರ ಬಿಳಿಲೊಡೆದು ನಿಂತಿದೆ.

ಸ್ವಾತಂತ್ರ್ಯಾನಂತರ ಸುಬ್ಬರಾಯನಕೆರೆಯಲ್ಲಿ ನಾಗರೀಕ ಸಮಿತಿ ಸಭೆ ನಡೆಸಲು ಆರಂಭಿಸಿತು. ಕ್ರಮೇಣ ಸುಬ್ಬರಾಯನಕೆರೆ ಅನೈತಿಕ ಚಟುವಟಿಕೆಗಳ ಕೇಂದ್ರವಾದಾಗ ಮೈಸೂರಿನ ಜನ ಸುಬ್ಬರಾಯನ ಕೆರೆ ಉಳಿಸಲು ಆಂದೋಲನವನ್ನೇ ನಡೆಸಬೇಕಾಯಿತು. ಕೊನೆಗೆ ಮೈಸೂರು ಕಾರ್ಪೋರೇಷನ್

ಸುಪರ್ದಿಗೆ ಒಳಪಟ್ಟಿದ್ದ ಸುಬ್ಬರಾಯನ ಕರೆಯನ್ನು 'ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನ'ವೆಂದು ಕರೆಯಲಾಯಿತು. ಸ್ವಾತಂತ್ರ್ಯ ಹೋರಾಟಗಾರರ ಸೌಧವನ್ನು ನಿರ್ಮಾಣ ಮಾಡಲಾಯಿತು. ಮೈಸೂರು ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರ ಸಂಘದ ಪದಾಧಿಕಾರಿಗಳು ಪ್ರತಿ ಶುಕ್ರವಾರ ಸಂಜೆ ಇಂದಿಗೂ ಭೇಟಿ ಆಗುತ್ತಾರೆ, ಸ್ವಾತಂತ್ರ್ಯ ದಿನಾಚರಣೆ, ಮೈಸೂರು ಚಲೋ ಸ್ಮರಣೆ, ಗಾಂಧೀ ಜಯಂತಿ, ಗಣರಾಜ್ಯೋತ್ಸವಗಳನ್ನು ಸುಬ್ಬರಾಯನ ಕೆರೆಯಲ್ಲಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ನಡೆಸಿಕೊಂಡು ಬರುತ್ತಿದ್ದಾರೆ.

ಒಟ್ಟಿನಲ್ಲಿ ಸುಬ್ಬರಾಯನ ಕೆರೆಯ ಮೈದಾನ ಇವತ್ತಿಗೂ ಸ್ವಾತಂತ್ರ್ಯ ಹೋರಾಟ ಕಾಲದ ಇತಿಹಾಸದ ಗುರುತಾಗಿ ಮೈಸೂರಿನ ಮಧ್ಯ ಭಾಗದಲ್ಲಿ ಸಾಕ್ಷಿಯಾಗಿ ನಿಂತಿದೆ.







**ಪ್ರಸ್ತುತ ಸುಬ್ಬರಾಯನ ಕೆರೆಯ ಛಾಯಚಿತ್ರಗಳು**


















## ಪರಾಮರ್ಶನ ಗ್ರಂಥಗಳು


೧. Mysore Administrative Reports.

೨. ಸಾಧ್ವಿ ಪತ್ರಿಕೆ.

೩. ನಂಜನಗೂಡು ತಾಲ್ಲೂಕ್ ಗೆಜೆಟೀಯರ್.

೪. Mahatma Gandhi's Campaign against Untouchability in Karnataka – Dr. G. A. Birdar.

೫. ತಾತಯ್ಯ ಸ್ಮರಣ ಸಂಚಿಕೆ – ಸಂ. ಎಂ. ಎನ್. ಜೋಯಿಸ್.

೬. ಕರ್ಮಯೋಗಿ – ತಗಡೂರು ರಾಮಚಂದ್ರರಾವ್ ಅಭಿನಂದನ ಗ್ರಂಥ – ಸಂ. ಎಂ. ಎನ್. ಜೋಯಿಸ್.

೭. ಸ್ವಾತಂತ್ರ್ಯದೆಡೆಗೆ – ಎಂ. ಎನ್. ಜೋಯಿಸ್ ಅಭಿನಂದನ ಗ್ರಂಥ– ಸಂ. ಪ್ರೇಮಲತಾ ಸುಂದರೇಶನ್.

೮. ಗಾಂಧೀ ಚಿಂತನ – ಬಿ. ಆರ್. ಪಿ. ಸದ್ಭಾವನಾ ಗ್ರಂಥ.

೯. ಸ್ವಾತಂತ್ರ್ಯ ಸಂಗ್ರಾಮದ ಮಹಾಭಾರತ – ಮೂಲ: ಗ. ಪ್ರ. ಪ್ರಧಾನ ಅನು: ಸರಸ್ವತೀ ರಿಸಬೂಡ.

೧೦. ಸ್ವಾತಂತ್ರ್ಯೋದಯದ ಮೈಲಿಗಲ್ಲುಗಳು – ಸಂ. ಎಸ್. ಆರ್. ರಾಮಸ್ವಾಮಿ.

೧೧. ಗಾಂಧೀ ಮತ್ತು ಕರ್ನಾಟಕ – ಸಂ. ಸಿದ್ಧವನಹಳ್ಳಿ ಕೃಷ್ಣಶರ್ಮ.

೧೨. ಮಹಾತ್ಮಾಗಾಂಧಿ – ನನ್ನ ತಾತ – ಮೂಲ: ಸುಮಿತ್ರಾ ಗಾಂಧಿ ಕುಲಕರ್ಣಿ ಅನು: ಪ್ರೊ. ಬಿ. ವೈ. ಲಲಿತಾಂಬ.


❖ ❖ ❖

### ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ
### ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಯ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |

| | | | |
|---|---|---|---|
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |



| | | | |
|---|---|---|---|
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ನೆಹರು ಮೈದಾನ | ಡಾ. ವಸಂತ ಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಜಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಜಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |

| | | | |
|---|---|---|---|
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಸತೀಶ ಕೆ. | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |